ಕರ್ನಾಟಕ ವಿಧಾನಪರಿಷತ್ತಿನ ನಡವಳಿಕೆಗಳು

# KARNATAKA LEGISLATIVE COUNCIL DEBATES

ಅಧಿಕೃತ ವರದಿ

## OFFICIAL REPORT

೧೩೦ ನೇ ಅಧಿವೇಶನ

## 130th SESSION

ಸಂಪುಟ–೪೪೨ ಕ್ರಮಾಂಕ (೨)

## Volume -443 (No. 2)

( ೨೮ ನೇ ಮಾರ್ಚ್ ೨೦೧೬)

## (28th March 2016)

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಬೆಂಗಳೂರು

**Karnataka Legislative Council Secretariat, Bangalore**

## ಕರ್ನಾಟಕ ವಿಧಾನ ಪರಿಷತ್ತು

28ನೇ ಮಾರ್ಚ್ 2016

ಸೋಮವಾರ

## ವಿಷಯಾನುಕ್ರಮಣಿಕೆ


**1. ಶ್ರೀ ಅನ್ವರ್ ಮಾನಪ್ಪಾಡಿ ವರದಿಯನ್ನು ಸದನದಲ್ಲಿ ಮಂಡಿಸುವಂತೆ ಒತ್ತಾಯಿಸಿ ಭಾರತೀಯ ಜನತಾ ಪಕ್ಷದ ಸದಸ್ಯರಿಂದ ಧರಣಿ** **2-23**

ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

ಶ್ರೀ ಎಸ್.ಆರ್.ಪಾಟೀಲ್ (ಸಭಾನಾಯಕರು)

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)

ಶ್ರೀ ವಿ.ಎಸ್.ಉಗ್ರಪ್ಪ

ಶ್ರೀ ಗೋ.ಮಧುಸೂದನ್

ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು)

ಶ್ರೀ ಪುಟ್ಟಣ್ಣ

ಶ್ರೀ ರಾಮಚಂದ್ರಗೌಡ

ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್

ಶ್ರೀ ಕೆ.ಬಿ.ಶಾಣಪ್ಪ

ಶ್ರೀ ಟಿ.ಎ.ಶರವಣ

ಶ್ರೀ ಜಿ.ರಘು ಆಚಾರ್

ಶ್ರೀ ವಿ.ಸೋಮಣ್ಣ

ಶ್ರೀ ವಿನಯ ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

# ಕರ್ನಾಟಕ ವಿಧಾನ ಪರಿಷತ್ತು

***ಸೋಮವಾರ, 28ನೇ ಮಾರ್ಚ್ 2016***

**ಸದನವು ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಪೂರ್ವಾಹ್ನ 11 ಗಂಟೆ 16 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ) ಅವರು ಪೀಠದಲ್ಲಿ ಉಪಸ್ಥಿತರಿದ್ದರು.**

~~~~~~~~
~~~~~~~~

**(ಸದನ ಆರಂಭವಾದಾಗ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ, ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಗೆ ಬಂದು ಧರಣಿಯನ್ನು ಪ್ರಾರಂಭಿಸಿದರು)**

**1. ಶ್ರೀ ಅನ್ವರ್ ಮಾನಪ್ಪಾಡಿ ವರದಿಯನ್ನು ಮಂಡಿಸುವಂತೆ ಒತ್ತಾಯಿಸಿ ಭಾರತೀಯ ಜನತಾ ಪಕ್ಷದ ಸದಸ್ಯರಿಂದ ಧರಣಿ**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಸಭಾಪತಿ ಸ್ಥಾನ ಎಂದರೆ, ಇಡೀ ದೇಶದಲ್ಲಿಯೇ ಗೌರವ ಕೊಡುವಂತಹ ಸ್ಥಾನ. ತಾವು ಈಗಾಗಲೇ ಮೂರು–ನಾಲ್ಕು ಬಾರಿ ರೂಲಿಂಗ್ ಕೊಟ್ಟರೂ ಕೂಡ, ಅಂತಹ ಸಭಾಪತಿಗಳು ಕೊಟ್ಟಂತಹ ರೂಲಿಂಗ್‌ನ್ನು ಕೂಡ ಪರಿಪಾಲನೆ ಮಾಡುವ ದಿಕ್ಕಿನಲ್ಲಿ ಕರ್ನಾಟಕ ರಾಜ್ಯದ ಕಾಂಗ್ರೆಸ್ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಹೀಗಾಗಿ ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡುವ ದಿಕ್ಕಿನಲ್ಲಿ ನಾವು ಇವತ್ತು ಧರಣಿ ಮಾಡುತ್ತಿದ್ದೇವೆ. ರಾಜ್ಯ ಸರ್ಕಾರ ತಾವು ರೂಲಿಂಗ್ ಕೊಟ್ಟ ನಂತರ ಅನ್ವರ್ ಮಾನಪ್ಪಾಡಿ ವರದಿಯನ್ನು ಮಂಡಿಸುತ್ತೇವೆ ಎಂದು ಪ್ರಾರಂಭದಲ್ಲಿ ಹೇಳಿ, ಯಾವುದೋ ಒಂದು ಶಿಫಾರಸ್ಸನ್ನು ತಂದು ಇದೇ ವರದಿ ಎನ್ನುವ ರೂಪದಲ್ಲಿಟ್ಟರು. ಅದರ ನಂತರ ತಾವು ಮತ್ತೆ ರೂಲಿಂಗ್ ಕೊಟ್ಟಿದ್ದೀರಿ. ಎರಡೂ ಕಡೆಯ ವಾದಗಳನ್ನು ಆಲಿಸಿ, ತಜ್ಞರ ಅಭಿಪ್ರಾಯವನ್ನು ಪಡೆಯಬೇಕಾಗಿರುವುದರಿಂದ ನನಗೆ ಸಮಯ ಬೇಕು ಎಂದು ಸಮಯ ತೆಗೆದುಕೊಂಡು ನಂತರ ಮೊನ್ನೆ ಸೋಮವಾರ ರೂಲಿಂಗ್ ಕೊಟ್ಟಿದ್ದೀರಿ. ಅದರಲ್ಲಿ ನೀವು ವರದಿಯನ್ನು ಮಂಡಿಸಿ ಎಂದು ಸರ್ಕಾರಕ್ಕೆ ತಿಳಿಸಿದಿರಿ, ಸರ್ಕಾರ ಕಾನೂನು ಸಚಿವರಿಗೆ ವಿಚಾರ ತಿಳಿಸಿದ್ದೇವೆ, ಅವರು ಬಂದು ಅಭಿಪ್ರಾಯ ಕೊಡುತ್ತಾರೆ, ಉತ್ತರ ಕೊಡುತ್ತಾರೆ ಎನ್ನುವಂತಹ ಮಾತುಗಳನ್ನು ಹೇಳುತ್ತಾ ಬಂದಿದೆ.

ಇವತ್ತು ಮಾನ್ಯ ಕಾನೂನು ಸಚಿವರು ಸದನಕ್ಕೆ ಬಂದಿದ್ದಾರೆ. ಈ ವಿಧಾನ ಪರಿಷತ್ತಿಗೆ ಬಂದ ನಂತರ ನನಗೆ ಆಶ್ಚರ್ಯವನ್ನು ತಂದಂತಹ ಒಂದು ಸಂಗತಿ ಎಂದರೆ, ವರದಿಯನ್ನು ಮಂಡನೆ ಮಾಡುವುದಕ್ಕೆ ಕಾನೂನು ಸಚಿವರೇ ಬರಬೇಕು ಎನ್ನುವುದನ್ನು ಸೂಚನೆ ಕೊಡಬೇಕು. ವಿಧಾನ ಪರಿಷತ್ತಿನಲ್ಲಿ ವರದಿ ಮಂಡನೆ ಮಾಡಬೇಕಾದರೆ ಕಾನೂನು ಸಚಿವರೇ ಬರಬೇಕು ಎಂದು ಇನ್ನು ಮುಂದೆ ಒಂದನೇ ತರಗತಿಯ ವಿದ್ಯಾರ್ಥಿಗಳಿಗೆ ಅಲ್ಲಿಂದಲೇ ನಾವು ಪಾಠ ಆರಂಭ ಮಾಡಬೇಕು. ನಾವು ಎಲ್ಲಿದ್ದೇವೆ ಎನ್ನುವಂತಹ ಒಂದು ಕಲ್ಪನೆಯೇ ಅವರಿಗಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಈಗ ಕಾನೂನು ಸಚಿವರು ಬಂದಿದ್ದಾರೆ. ತಮ್ಮದೇನು requirement ಇದೆ, ಅದಕ್ಕೆ ಏನು ಉತ್ತರ ಹೇಳಬೇಕು, ಅವರಿಗೇಕೆ ಸಮಯ ಬೇಕು... ಈಗ ನೋಡಿ, ಮೊನ್ನೆ ಶುಕ್ರವಾರ ಸದನದ ಅಮೂಲ್ಯವಾದ ಸಮಯ ಒಂದು ದಿವಸ ಪೂರ್ತಿಯಾಗಿ ಹಾಳಾಗಿ ಹೋಯಿತು. ಈ ಸದನ ನಡೆಯುವುದು ರಾಜ್ಯದ ತೆರಿಗೆದಾರರ ಹಣದ ಮೇಲೆ. ಪ್ರತಿ ಸೆಕೆಂಡ್‌ಗೂ ಹಣ ಖರ್ಚಾಗುತ್ತದೆ. ಅದರ ವೆಚ್ಚವನ್ನು ಭರಿಸುವವರು ತೆರಿಗೆದಾರರು. ಇವರ ಮೊಂಡುತನದಿಂದ ಒಂದು ದಿವಸ ಪೂರ್ತಿಯಾಗಿ ಸದನದ ಸಮಯ ಹಾಳಾಯಿತು. ಕಾನೂನು ಸಚಿವರು ಮೊನ್ನೆ ಶುಕ್ರವಾದ ಮಧ್ಯಾಹ್ನ 3.00 ಗಂಟೆಗೆ ಬರುವುದಾಗಿ ನಾನೇನು ತಿಳಿಸಿದ್ದೆ, ಅದರಂತೆ ಕಾನೂನು ಸಚಿವರು ಆ ಸಮಯಕ್ಕೆ ಪೂರ್ವದಲ್ಲಿಯೇ ಬಂದರು. ಆದರೆ ಅವರು ಬಂದು ಸದನದಲ್ಲಿ ಉತ್ತರ ಹೇಳಬೇಕೆಂದರೆ, ಆ ವೇಳೆಗಾಗಲೇ ಸದನವನ್ನು ಸೋಮವಾರಕ್ಕೆ ಮುಂದೂಡಲಾಗಿತ್ತು. ತೆರಿಗೆದಾರರ ಹಣದ ಮೇಲೆ ಏನು ಈ ಸದನ ನಡೆಯುತ್ತದೆ, ಇದಕ್ಕೆ ನೇರವಾಗಿ ಇವರು ಹೊಣೆಗಾರರಾಗುತ್ತಾರೆ.

ಮಾನ್ಯ ಸಭಾಪತಿಯವರೇ, ಇವರಿಗೆ ಈ ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದರಲ್ಲಿ ಆಸಕ್ತಿ ಇಲ್ಲ. ಈ ಸದನದ ಕಾರ್ಯಕಲಾಪಗಳನ್ನು ತಡೆಹಿಡಿಯುವುದಷ್ಟೇ ಇವರ ಮೂಲ ಉದ್ದೇಶ. ಇವರಿಗೆ ಈ ರಾಜ್ಯದ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಚರ್ಚೆ ಮಾಡುವುದರಲ್ಲಿ ಆಸಕ್ತಿ ಇಲ್ಲ. 4 ದಶಕಗಳ ನಂತರ ಬಂದೊದಗಿರುವ ಭೀಕರ ಬರಗಾಲದ ಬಗ್ಗೆ ಚರ್ಚೆ ಆಗುವಂತಹ ವಿಚಾರಕ್ಕೆ ಇವರು ತಯಾರಿಲ್ಲ. ಈ ಸಾಲಿನ ಆಯವ್ಯಯದ ಮೇಲಿನ ಚರ್ಚೆಯಲ್ಲಿ ಸುಮಾರು 50 ಜನ ಮಾನ್ಯ ಸದಸ್ಯರು ಮಾತನಾಡಲಿಚ್ಛಿಸಿದ್ದಾರೆ. ಆದರೆ, ಆ ಗೌರವಾನ್ವಿತ ಸದಸ್ಯರು

ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಕೂಡ ಅವಕಾಶವಿಲ್ಲದಂತೆ ಇವರು ತೊಂದರೆ ಕೊಡುತ್ತಿದ್ದಾರೆ. ಒಟ್ಟಾರೆ ಇವರಿಗೆ ಈ ರಾಜ್ಯದ ಸಮಸ್ಯೆಗಳು ಬಗೆಹರಿಯಬಾರದು, ಈ ರಾಜ್ಯದ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಯಾಗಬಾರದು ಮತ್ತು ಸದನದ ಕಲಾಪ ವ್ಯರ್ಥವಾಗಿ ಹೋಗಬೇಕು ಎನ್ನುವುದಾಗಿದೆ. ಈ ರಾಜ್ಯದ ತೆರಿಗೆದಾರರ ಹಣದಿಂದ ನಡೆಯುವಂತಹ ಈ ಸದನದ ಬಗ್ಗೆ ವಿರೋಧ ಪಕ್ಷದ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರಿಗೆ ಕಾಳಜಿ, ಕಕ್ಕುಲಾತಿ ಇರಬೇಕೆನ್ನುವುದನ್ನು ತಮ್ಮ ಮೂಲಕ ಅವರಿಗೆ ತಿಳಿಸಬಯಸುತ್ತಿದ್ದೇನೆ. ಈ ಸದನದ ಸಮಯ ಒಂದು ದಿವಸ ಪೂರ್ತಿಯಾಗಿ ವ್ಯರ್ಥವಾಗಿ ಹೋಗಲಿಕ್ಕೆ, ಹಾಳಾಗಿ ಹೋಗಲಿಕ್ಕೆ, ಈ ರಾಜ್ಯದ ಸಮಸ್ಯೆಗಳ ಬಗೆಗಿನ ಚರ್ಚೆಯಿಂದ ಈ ಸದನ ವಿಮುಖವಾಗಲಿಕ್ಕೆ ಭಾರತೀಯ ಜನತಾ ಪಕ್ಷದ ನಾಯಕರು ಮತ್ತು ಎಲ್ಲಾ ಸದಸ್ಯರು ಹೊಣೆಗಾರರೆಂದು ನಾನು ಹೇಳಬೇಕಾಗುತ್ತದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಇವರು ತೆರಿಗೆದಾರರ ಹಣದ ಬಗ್ಗೆ ಮಾತನಾಡುತ್ತಿದ್ದಾರೆ. ವಕ್ಫ್ ಆಸ್ತಿ 57 ಸಾವಿರ ಎಕರೆ ಲೂಟಿಯಾಗಿದೆ, ಮತ್ತು 15 ಲಕ್ಷ ಕೋಟಿ ರೂಪಾಯಿ ಲೂಟಿಯಾಗಿದೆ. ಈ ಲೂಟಿ ಬಗ್ಗೆ ಮಾತನಾಡುವುದನ್ನು ಬಿಟ್ಟು ಮಾನ್ಯ ಸಭಾನಾಯಕರು ಇಲ್ಲಿ ತೆರಿಗೆದಾರರ ಹಣದ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಅದಕ್ಕೋಸ್ಕರ ಕೇಳಬಯಸುತ್ತಿದ್ದೇನೆ, 15 ಲಕ್ಷ ಕೋಟಿ ರೂಪಾಯಿಗಳಷ್ಟು ವಕ್ಫ್ ಆಸ್ತಿಯ ಹಣ ಎಲ್ಲಿ ಹೋಯಿತು? ಅದರ ಬಗ್ಗೆ ನಾವು ಇವತ್ತು ಹೋರಾಟ ಮಾಡುತ್ತಿದ್ದೇವೆ. ಅದು ಕೂಡ ಮುಸಲ್ಮಾನರ ಧರ್ಮಕ್ಕೆ ಸೇರಿದಂತಹ ವಕ್ಫ್ ಪ್ರಾಪರ್ಟಿಯ 15 ಲಕ್ಷ ಕೋಟಿ ರೂಪಾಯಿಗಳಷ್ಟು ಹಣ, ಪವಿತ್ರವಾದ ಹಣ. ಅದನ್ನು ಲೂಟಿ ಮಾಡಿರುವ ಬಗ್ಗೆ ವರದಿ ಮಂಡಿಸಿ ಎಂದು ನಾವು ಕೇಳಿದರೆ, ಆ ವರದಿ ಮಂಡಿಸುವುದಕ್ಕೆ ಕಾನೂನು ಸಚಿವರು ಬರಬೇಕಂತೆ. ಈ ಪಾಠವನ್ನು ಇವರು ಇನ್ನು ಮುಂದೆ ಎಲ್.ಕೆ.ಜಿ. ವಿದ್ಯಾರ್ಥಿಗಳಿಗೆ ಹೇಳಬೇಕು. ಎಲ್.ಕೆ.ಜಿ.ಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ವರದಿ ಮಂಡಿಸಲು ಕಾನೂನು ಸಚಿವರು ಬರಬೇಕೆಂದು ಪಾಠ ಹೇಳಬೇಕು.

**(ಗೊಂದಲ)**

**ಸಭಾಪತಿಯವರು:–** ಆಯಿತು, ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಭಾನಾಯಕರು ಈ ವಿಚಾರದ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನು ಸದನ ನಡೆಸಬೇಕೆನ್ನುವ ಕಾರಣಕ್ಕಾಗಿ, ಸದನ ನಡೆಸುವುದಕ್ಕೆ ಒಂದು ವಾತಾವರಣ ನಿರ್ಮಾಣವಾಗಬೇಕು. ಆದ್ದರಿಂದ ಯಾರು ಧರಣಿ ನಿರತರಿದ್ದಾರೆ, ನಿಮ್ಮ demands ಬಗ್ಗೆ ನಾನು ಏನು ವಿಷಯ ಹೇಳಿದೆ, ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅನುವು ಮಾಡಿಕೊಡಿ. ಸದನ ನಡೆಸೋಣ. ಆಮೇಲೆ ಮುಂದಿನದನ್ನು ನೋಡೋಣ. ಸದನ ನಡೆಸುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಿ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಸದನ ನಡೆಸುವುದಕ್ಕೆ ಪೂರ್ಣ ಅವಕಾಶವನ್ನು ನಾವು ಕೊಡುತ್ತೇವೆ. ನಮ್ಮ ಹಕ್ಕು ಏನಿದೆ, ಶ್ರೀ ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಸರ್ಕಾರ ಮಂಡಿಸುತ್ತದೋ ಇಲ್ಲವೋ ಸ್ಪಷ್ಟನೆ ಮಾಡಲಿ. ವರದಿ ಮಂಡಿಸುತ್ತೇವೆಂದು ಹೇಳಿದರೆ ನಾವು ಸದನ ನಡೆಸುವುದಕ್ಕೆ ಪೂರ್ಣ ಸಹಕಾರ ಕೊಡುತ್ತೇವೆ. ಮಾನ್ಯ ಕಾನೂನು ಸಚಿವರು ಬಂದಿದ್ದಾರೆ, ಅವರು ಸ್ಪಷ್ಟ ಹೇಳಲಿ, ನಾನು ವರದಿಯನ್ನು ಮಂಡಿಸುತ್ತೇನೆ ಎಂಬ ಮಾತನ್ನು ಹೇಳಿದರೆ ತಕ್ಷಣ ನಮ್ಮ ಸದಸ್ಯರು ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ ತಾವು ನೀಡಿರುವ ರೂಲಿಂಗ್ ಪಾಲನೆ ಆಗಬೇಕು, ಅಷ್ಟೇ. ಅದು ಬಿಟ್ಟರೆ ಬೇರೆನಿಲ್ಲ.

**ಶ್ರೀ ಎಸ್.ಆರ್.ಪಾಟೀಲ್(ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮೊದಲು House order ನಲ್ಲಿ ಬರಲಿ ಆಮೇಲೆ...

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ನಾನು ಮೊನ್ನೆ ದಿವಸ ಶಿವಮೊಗ್ಗದಲ್ಲಿ ನಡೆಯುವಂತಹ ಘಟಿಕೋತ್ಸವ ಸಮಾರಂಭಕ್ಕೆ ಹೋಗಲೇ ಬೇಕಾಗಿತ್ತು. ಮಾನ್ಯ ರಾಜ್ಯಪಾಲರ ಕಛೇರಿಯಿಂದ ನೀವು ಈ ಸಮಾರಂಭಕ್ಕೆ ಬರಲೇಬೇಕೆಂದು ದೂರವಾಣಿಯ ಕರೆ ಬಂದಿತ್ತು. ಏಕೆಂದರೆ, ಒಮ್ಮೊಮ್ಮೆ ಕಡೇ ಗಳಿಗೆಯಲ್ಲಿ ರಾಜ್ಯಪಾಲರು ಕ್ಯಾನ್ಸಲ್ ಮಾಡುವಂತಹ ಸಂದರ್ಭಗಳು ಬರುತ್ತದೆ. ಆ ಕಾರಣಕ್ಕೋಸ್ಕರ ನಾನು ಅವರ ಜೊತೆಯಲ್ಲಿಯೇ ಹೋಗಿ ಅವರ ಜೊತೆಯಲ್ಲಿಯೇ ವಾಪಸ್ಸು ಬಂದೆ. ನಾನು ಮಧ್ಯಾಹ್ನ ಒಂದೂವರೆ ಗಂಟೆಗೆ ಬಂದೆ. ಬಂದ ತಕ್ಷಣ ಈ ಸದನಕ್ಕೆ ಬಂದೆ. ಆಗ ಸದನವನ್ನು ಮುಂದೂಡಲಾಗಿದೆ ಎಂದು ತಿಳಿದುಬಂತು. ಇವತ್ತು ನಾನು ಸದನಕ್ಕೆ ಬಂದಿದ್ದೇನೆ. ಕೇವಲ ಒಂದು ವರದಿಯನ್ನು ಮಂಡನೆ ಮಾಡಬೇಕೆಂದು ತಾವು ಧರಣಿ ಮಾಡುತ್ತಿರುವಂಥದ್ದು. ನಮಗೆ ಮಾನ್ಯ ಸಭಾಪತಿಗಳು ಕೊಟ್ಟಿರುವಂತಹ ರೂಲಿಂಗಿನ ಹಿನ್ನಲೆಯಲ್ಲಿ ಕೆಲವು ವಿಚಾರಗಳನ್ನು ಅವರ ಗಮನಕ್ಕೆ ತರಬೇಕಾಗುತ್ತದೆ. ಅದನ್ನು ತಂದ ಮೇಲೆ ನೀವು ತದನಂತರ ಧರಣಿ ಮಾಡುತ್ತೀರೋ ಏನು ಮಾಡುತ್ತೀರೋ ಎನ್ನುವಂತಹ ವಿಷಯ ನಿಮಗೆ ಬಿಟ್ಟಿದ್ದು. ಆದರೆ ನಮಗೆ ಹೇಳುವುದಕ್ಕಾದರು ಅವಕಾಶ ಕೊಡಿ. ಇವತ್ತು ಮಾನ್ಯ ಸಭಾಪತಿಯವರು ಹೌಸ್ ಆರ್ಡರ್‌ನಲ್ಲಿದೆ, ನೀವು ಈ ವಿಚಾರವನ್ನು ಮಂಡಿಸಿ ಎಂದು ಹೇಳಿದರೆ ನಾನು ಹೇಳುವುದಕ್ಕೆ ತಯಾರಿದ್ದೇನೆ.

**ಶ್ರೀ.ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ ವರದಿಯನ್ನು ಮಂಡಿಸುತ್ತೀರೋ, ಅಥವಾ ವಿಚಾರವನ್ನು ಮಂಡಿಸುತ್ತೀರೋ? ಅದನ್ನು ಮೊದಲು ಸ್ಪಷ್ಟಪಡಿಸಿ. ವರದಿಯನ್ನು ಮಂಡಿಸುತ್ತೇವೆಂದು ಹೇಳಿದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, I have a Point of Order. ಯಾವ ರೂಲಿನಲ್ಲಿ ಈ ವಿಷಯವನ್ನು ತೆಗೆದುಕೊಂಡಿದ್ದೀರಿ ಎಂಬ ವಿಷಯವನ್ನು ದಯಮಾಡಿ ಹೇಳುತ್ತೀರಾ?

**ಶ್ರೀ ಗೋ.ಮಧುಸೂದನ್:–** ಅದನ್ನು ಆಮೇಲೆ ಹೇಳುತ್ತೇವೆ ಸರ್.

**ಶ್ರೀ ವಿ.ಎಸ್.ಉಗ್ರಪ್ಪ:–** ದಯಮಾಡಿ ಹೇಳಿ ಯಾವ ರೂಲಿನಲ್ಲಿ ಇದನ್ನು ತೆಗೆದುಕೊಂಡಿದ್ದೀರಿ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರ ರೂಲಿಂಗ್ ಅನ್ನೇ ಇವರು ಮಾಡದೆ ಇರುವವರು Point of Order ಕೇಳುತ್ತಾರೆ. ಸಭಾಪತಿಯವರ ರೂಲಿಂಗ್ ಅನ್ನೇ ಇವರು ಪರಿಪಾಲನೆ ಮಾಡದೆ ಇರುವವರು ಕಾನೂನಿನ ಬಗ್ಗೆ ಮಾತನಾಡುವುದಕ್ಕೆ ಇವರಿಗೆ ಏನೂ ಅಧಿಕಾರವಿಲ್ಲ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ಸಭಾಪತಿಯವರೇ, LKG levelನಲ್ಲಿ ಇರುವಂತಹವವರಿಗೆ First Standard ಅರ್ಥ ಆಗುತ್ತದೆಯೇ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಇವರಿಗೆ ಏನು ಅಧಿಕಾರ ಇದೆ?

**ಶ್ರೀ ವಿ.ಎಸ್.ಉಗ್ರಪ್ಪ:–**ಮಾನ್ಯ ಸಭಾಪತಿಯವರೇ, LKG ನಲ್ಲಿ ಇರುವಂತಹ ಮಾನ್ಯ ಈಶ್ವರಪ್ಪನವರಿಗೆ ಏನಾದರು ನಿಯಮಾವಳಿಗಳು ಅರ್ಥ ಆಗುತ್ತದೆಯೇ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ;–** ಸಭಾಪತಿಯವರೆ, ನಿಮ್ಮ ರೂಲಿಂಗ್ ಅನ್ನು ಪರಿಪಾಲನೆ ಮಾಡುತ್ತಾರೋ ಇಲ್ಲವೋ ಕೇಳಿ, ವರದಿಯನ್ನು ಮಂಡಿಸುತ್ತಾರೋ ಇಲ್ಲವೋ ಕೇಳಿ.

(ಗೊಂದಲ)

**ಶ್ರೀ ವಿ.ಎಸ್.ಉಗ್ರಪ್ಪ:–** ನಿಮಗೆ ಸದನದಲ್ಲಿ ಹೇಗೆ ನಡೆದುಕೊಳ್ಳಬೇಕು ಎನ್ನುವುದು ಗೊತ್ತಿಲ್ಲವೆ? ನಿಯಮಾವಳಿಗಳು ಗೊತ್ತಿಲ್ಲವೆ ನಿಮಗೆ?

(ಗೊಂದಲ)

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ.

**ಶ್ರೀ ವಿ.ಎಸ್,ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು Point of Order raise ಮಾಡಿದ್ದೇನೆ.

**ಸಭಾಪತಿಯವರು:–** ಆಯಿತು ನೀವು ಹೇಳಿದ್ದೀರಿ. ನಾನೂ ಹೇಳುತ್ತೇನೆ.

**ಶ್ರೀ ವಿ.ಎಸ್,ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಯಾವ ನಿಯಮಾವಳಿ ಅಡಿಯಲ್ಲಿ ಇದನ್ನು ತೆಗೆದುಕೊಂಡಿದ್ದೀರಿ? ನೀವು ಯಾವ ನಿಯಮಾವಳಿ ಅಡಿಯಲ್ಲಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೀರಿ ದಯಮಾಡಿ ಹೇಳಿ.

(ಗೊಂದಲ)

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಈಗ ಸದನವನ್ನು ಆರ್ಡರ್‌ಗೆ ತರಬೇಕು. ಧರಣಿ ಮಾಡುತ್ತಿರುವಂತಹ ಮಾನ್ಯ ಸದಸ್ಯರನ್ನು ಮತ್ತೊಮ್ಮೆ ಕೇಳುತ್ತೇನೆ, ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಗೊ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ತಾವು Kaul and Shakdher ಪುಸ್ತಕದ ಪುಟ ಸಂಖ್ಯೆ 126 ನೋಡಬೇಕೆಂದು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಪುಟ ಸಂಖ್ಯೆ 126ರಲ್ಲಿ **Rulings of the Speaker** ಎಂದು ಇದೆ.

> *"It is the right of the Speaker to interpret the Constitution and Rules, so far as matters in or relating to the House are concerned, and no one, including the Government, can enter into any argument or controversy with the Speaker over such interpretation."*

ಮಾನ್ಯ ಸಭಾಪತಿಯವರೇ, ತಾವು ಕೊಟ್ಟಿರುವಂತಹ ರೂಲಿಂಗ್ ಇದು ಸರ್ವೋಚ್ಚ. ಯಾವುದೇ ವ್ಯಕ್ತಿ ಈ ಒಂದು ಸರ್ಕಾರ ಸಹ ತಾವು ಕೊಟ್ಟಿರುವಂತಹ ರೂಲಿಂಗ್ ಬಗ್ಗೆ ಯಾವುದೇ interpretation ಆಗಲಿ, ಯಾವುದೇ ತಕರಾರು ಆಗಲಿ ಮಾಡುವಂತಿಲ್ಲ.

> *"His rulings constitute precedents by which subsequent Speakers, members and officers are guided. Such precedents are collected, and in course of time, formulated as rules of procedure or followed as conventions. The Speaker's rulings, as already stated, cannot be questioned except on a substantive motion. A member who protests against the ruling of the Speaker commits contempt of the House and the Speaker. The Speaker's decision is equally binding whether given in the House or on a departmental file. He is not bound to give reasons for his decisions."*

ತಾವು ತಮ್ಮ ರೂಲಿಂಗ್‌ಗೆ ಯಾವುದೇ ಡಿಸೀಷನ್ ಕೊಡಬೇಕಾದಂತಹ ಅವಶ್ಯಕತೆ ಇಲ್ಲ. ತಾವು ಕೊಟ್ಟಿರುವಂತಹ ರೂಲಿಂಗ್ it is final. ಈ ರೂಲಿಂಗ್ ಬಗ್ಗೆ ಯಾವುದೇ ಚಕಾರವನ್ನು

ಎತ್ತುವುದಕ್ಕೆ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ, ಈಗ ತಮ್ಮ ರೂಲಿಂಗ್ ಪರಿಪಾಲನೆ ಮಾಡುವುದು ಬಿಟ್ಟು, ಸರ್ಕಾರಕ್ಕೆ ಬೇರೆ ಯಾವುದೇ ದಾರಿ ಇಲ್ಲ. ಅದು ಆಗಲೇ ಅವರು ಒಂದು ಸಲ ಪರಾಮರ್ಶೆ ಮಾಡಬೇಕೆಂದು ಹೇಳಿದರು. ಅದರಂತೆ ತಾವು ಪರಾಮರ್ಶೆ ಮಾಡಿದಿರಿ. ಅದಕ್ಕೆ ಒಂದು ಸಲ ನೀವು ರೂಲಿಂಗ್ ಕೊಟ್ಟಿದ್ದೀರಿ. ಎರಡನೇ ಸಲ ಪರಾಮರ್ಶೆ ಮಾಡಬೇಕೆಂದು ಕೇಳಿದರು ಆಗಲೂ ಎರಡನೇ ಸಲ ರೂಲಿಂಗ್ ಕೊಟ್ಟಿದ್ದೀರಿ. ಮಾನ್ಯ ಸಭಾಪತಿಯವರೇ, ಇದು ನಾಚಿಕೆ ಇಲ್ಲದಿರುವಂತಹ ಸರ್ಕಾರ. ದಿನಬೆಳಗಾದರೆ ನಾಟಕ..... ದಿನಬೆಳಗಾದರೆ ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:- Historical reply ಆಗುತ್ತದೆ. ಸದನದ ಇತಿಹಾಸದಲ್ಲಿ ಇದೊಂದು ಪ್ರಿಸಿಡೆಂಟ್ ಆಗುತ್ತದೆ.**

(ಗೊಂದಲ)

**ಶ್ರೀ ಗೋ.ಮಧುಸೂದನ್:-** ಯಾವುದೋ ಭ್ರಷ್ಟರನ್ನು ರಕ್ಷಣೆ ಮಾಡುವಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ.

**ಶ್ರೀ ಎಸ್.ಆರ್.ಪಾಟೀಲ್:- ಹೌಸ್ ಆರ್ಡರನಲ್ಲಿ ಇಲ್ಲ.**

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:-** ಸನ್ಮಾನ್ಯ ಸಭಾಪತಿಯವರೇ, ಕಾನೂನು ಸಚಿವರು ಬರಬೇಕಾಗಿತ್ತು ಎಂದು ಹೇಳಿದರು, ಬಂದಿದ್ದಾರೆ. ಅದಕ್ಕೆ ಉತ್ತರ ಕೊಡುವುದಕ್ಕೆ ತಯಾರಿದ್ದಾರೆ. Ask them to go to their respective seats.

**ಸಭಾಪತಿಯವರು:-** ಸದನ ನಡೆಯಬೇಕು. ಸದನ ನಡೆಯುವಂತಹ ವಾತಾವರಣ ನಿರ್ಮಾಣವಾದರೆ ಬಾಕಿ ವಿಷಯಗಳ ಬಗ್ಗೆ ನಾವು ಚರ್ಚೆ ಮಾಡಬಹುದು. ಸರ್ಕಾರದ ಪರವಾಗಿ ಅವರನ್ನು ...

**(ಗೊಂದಲ)**

**ಶ್ರೀ ಗೋ.ಮಧುಸೂದನ್:-** ಸರ್ಕಾರ ವರದಿ ಮಂಡನೆ ಮಾಡುವುದು ಬಿಟ್ಟು ಬೇರೆ ಯಾವುದೇ ಉತ್ತರ ಬೇಕಾಗಿಲ್ಲ. ಮಾನ್ಯ ಸಭಾಪತಿಯವರೇ, ಅವರು ವರದಿ ಮಂಡನೆ ಮಾಡುತ್ತಾರಾ ಕೇಳಿ. ವರದಿ ಮಂಡನೆ ಮಾಡಬೇಕಷ್ಟೆ. ಅದು ಬಿಟ್ಟು ಬೇರೆ ದಾರಿ ಇಲ್ಲ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:-** He cannot dictate us. ನಾವು ವರದಿಯನ್ನು ಮಂಡನೆ ಮಾಡುತ್ತೇವೋ , ಏನು ಮಂಡನೆ ಮಾಡುತ್ತೇವೋ ಅದಕ್ಕೆ ಉತ್ತರ ಕೊಡುತ್ತೀವೋ .....

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೇ, ತಮ್ಮ ರೂಲಿಂಗ್ ಅನ್ನು ಸರ್ಕಾರ ಒಪ್ಪುತ್ತದೋ ಇಲ್ಲವೋ? ವರದಿ ಮಂಡನೆ ಮಾಡುತ್ತದೋ ಇಲ್ಲವೋ? ಎಂಬುದನ್ನು ಮಾನ್ಯ ಕಾನೂನು ಸಚಿವರು ಅಥವಾ ಸಭಾ ನಾಯಕರು ಸ್ಪಷ್ಟ ಪಡಿಸಲಿ. ನಾವು ಧರಣಿಯನ್ನು ವಾಪಸ್ಸು ಪಡೆಯುತ್ತೇವೆ ಸದನ ನಡೆಯಬೇಕು.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಸದನದಲ್ಲಿ ವರದಿಯನ್ನು ಮಂಡಿಸಬೇಕು. ವರದಿಯನ್ನು ಮಂಡಿಸುತ್ತಾರೋ ಇಲ್ಲವೋ ಎನ್ನುವುದನ್ನು ಸರ್ಕಾರ ಹೇಳಲಿ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಇವತ್ತು ನಿಮ್ಮ ಛೇರ್‌ಗೆ blackmail ಮಾಡುತ್ತಿದ್ದಾರೆ ಇವರು. ಈ ರೀತಿ blackmail ಮಾಡುವುದು ಸರಿಯಲ್ಲ.

(ಗೊಂದಲ)

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಾನೂನು ಸಚಿವರು ಇವತ್ತು ಬಂದಿದ್ದಾರೆ. ಅವರು ಏನು ಹೇಳುತ್ತಾರೆ ಎಂಬುದನ್ನು ಕೇಳಿ. ಅದು ಬಿಟ್ಟು ಈ ರೀತಿ .... ಅವರು ಏನು ಮಾತನಾಡುತ್ತಾರೆ ಎಂಬುದನ್ನೇ ಕೇಳಿಸಿಕೊಳ್ಳುವುದಿಲ್ಲ.

(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಾದಂತಹ ಮಾನ್ಯ ಗೋ.ಮಧುಸೂದನ್‌ರವರು ಹೌಸ್ ಆರ್ಡರ್‌ನಲ್ಲಿ ಇಲ್ಲದೆ ಇರುವಂತಹ ಸಮಯದಲ್ಲಿಯೂ ಕೂಡ ತಾವು ರೈಸ್ ಮಾಡುವುದಕ್ಕೆ ಅನುಮತಿ ಸಿಕ್ಕಿದೆ ಎಂದು ಭಾವಿಸಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ. ನೀವು ಈಗ "Practice & Procedure of Parliament" ಪುಸ್ತಕವನ್ನು ಓದುತ್ತಿದ್ದೀರಲ್ಲ, ಅದರ next para ಸಹ ಓದಿ. ನೀವು ಓದಬೇಕಾದಾಗ ಒಂದೊಂದು ಸಲ confusion ಆಗಬಹುದು. ಆದಕಾರಣ ನಾನು ಹೇಳುತ್ತೇನೆ. Kaul and Shakdher ನಲ್ಲಿ ಅವರು ಓದಿರುವಂತಹ ವಿಷಯವನ್ನೇ ನಾನು ಓದುತ್ತಿರುವುದು.

**Miscellaneous Functions of the Speaker.**

> *"All matters not specifically provided for in the Rules and all questions relating to the detailed working of the Rules are regulated in such manner as the Speaker, from time to time, directs. As already stated, these directions are compiled and published for guidance."*

ಅಂದರೆ Speaker's Powers and Functions ಏನು ಎಂಬುದು ಡಿಸೈಡ್ ಆಗಿದೆ.

> "*However, the Speaker has only those powers which are given to him by the House or the Rules. He cannot start a new procedure of his own."*

*Piecemeal ಆಗಿ ನೋಡಬೇಡಿ.*

**(11.30 ಗಂಟೆ)**

**ಶ್ರೀ ಗೋ.ಮಧುಸೂದನ್(ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಬಾಪತಿಯವರೇ, ಇದನ್ನೇ ನಾನು ಮೊದಲು ಹೇಳಿದ್ದು, ಇದನ್ನೆಲ್ಲ ನಾನು ಸಹ ನೋಡಿದ್ದೇನೆ. Koul and Shokdar ಪುಸ್ತಕದ ಪುಟ ಸಂಪುಟ 126ರಲ್ಲಿ ಏನು ಹೇಳುತ್ತಾರೆಂದರೆ *"It is the right of the Speaker to interpret the Constitution and Rules, so far as matters in or relating to the House are concerned, "*

**ಸಭಾಪತಿಯವರು:-** ಇದೇ ಚರ್ಚೆ ಮುಂದುವರೆಯಬೇಕೆಂದು ಸಭೆ ನಿರ್ಣಯಸುವುದಾದರೆ ಮುಂದುವರೆಸಲಿ,

**ಶ್ರೀ ಕೆ.ಎಸ್.ಈಶ್ವರಪ್ಪ:-** ಸರ್ಕಾರ ವರದಿಯನ್ನು ಮಂಡಿಸುತ್ತದೆಯೋ ಇಲ್ಲವೋ ಎನ್ನುವುದನ್ನು ಹೇಳಲಿ.

**ಸಭಾಪತಿಯವರು:-** ಸದನ ಒಂದು ಆರ್ಡರ್‌ಗೆ ಬಂದರೆ ಸದಸ್ಯರು ಅವರವರ ಸ್ಥಾನದಲ್ಲಿ ಕುಳಿತರೆ ನಾವು ಎಲ್ಲಾ ಚರ್ಚೆಗಳನ್ನು ಮುಂದಕ್ಕೆ ತೆಗೆದುಕೊಂಡು ಹೋಗಬಹುದು. ವರದಿಯನ್ನು

ಮಂಡಿಸುತ್ತೇವೆ ಎಂದು ಸರ್ಕಾರದ ಹೇಳದ ಹೊರತು ಧರಣಿಯನ್ನು ಹಿಂದಕ್ಕೆ ಪಡೆಯುವುದಿಲ್ಲ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ. ಸರ್ಕಾರದವರು ಏನು ಹೇಳುತ್ತಾರೋ ನೋಡಿಕೊಂಡು ಅವರು ವರದಿಯನ್ನು ಮಂಡಿಸುವುದಾದರೆ ನೀವು ಧರಣಿಯನ್ನು ಹಿಂದಕ್ಕೆ ಪಡೆಯಿರಿ, ಇಲ್ಲದಿದ್ದರೆ ಏನು ಮಾಡಬೇಕೆನ್ನುವುದು ನಿಮ್ಮ ಇಬ್ಬರಿಗೆ ಬಿಟ್ಟದ್ದು, ಮಧ್ಯೆದಲ್ಲಿ ನನ್ನನ್ನು ತರಬೇಡಿ.

**ಶ್ರೀ ಗೋ.ಮಧುಸೂದನ್:–** ಸನ್ಮಾನ್ಯ ಸಭಾಪತಿಯವರೇ ವರದಿಯನ್ನು ಮಂಡಿಸುತ್ತಾರೋ ಇಲ್ಲವೋ ಎನ್ನುವುದನ್ನು ಹೇಳಿದರೆ ಸಾಕು.

**ಶ್ರೀ ಟಿ.ಬಿಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೇ, ತಾವು ಈಗಾಗಲೇ ಕೊಟ್ಟಿರತಕ್ಕ ತೀರ್ಪು ಮತ್ತು ಆ ತೀರ್ಪಿನ ಅನ್ವಯ ಅದು ಈ ಸದನದ ಒಂದು ಇತಿಹಾಸವನ್ನು ಸೃಷ್ಟಿ ಮಾಡುತ್ತದೆ. ಈಗಾಗಲೇ ತಾವು ನೀಡಿರುವ ಆದೇಶ ಏನು? ಈಗ ಸದನ ಇರುವ ರೀತಿಯಲ್ಲಿಯೇ ಚರ್ಚೆಯನ್ನು ಪ್ರಾರಂಭ ಮಾಡೋಣ ಎಂದಲ್ಲಿ ನನ್ನದೇನೂ ಅಭ್ಯಂತರವಿಲ್ಲ. ಅವರನ್ನು ಹಿಂದಕ್ಕೆ ಕಳುಹಿಸುವ ವಿಚಾರದಲ್ಲಿ ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕು. ಈ ಸದನಕ್ಕೆ ಇರುವ ಘನತೆಯ ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಆ ಬಗ್ಗೆ ಅನೇಕ ಸಂದರ್ಭಗಳಲ್ಲಿ ನಾನು ಉಲ್ಲೇಖಿಸಿದ್ದೇನೆ. ನೂರು ವರ್ಷಗಳ ಇತಿಹಾಸ ಇರತಕ್ಕ ಸಭೆಯಲ್ಲಿ ಹೌಸ್ ಆರ್ಡರ್‌ನಲ್ಲಿಯೇ ಇರದಿದ್ದ ಸಭೆಯಲ್ಲಿ ಅತ್ಯಂತ ಪ್ರಮುಖವಾದ ವಿಚಾರವನ್ನು ಹೇಗೆ ಪ್ರಸ್ತಾಪಿಸುವುದು? ಇದೊಂದು ಇತಿಹಾಸವನ್ನು ಸೃಷ್ಟಿ ಮಾಡುತ್ತದೆ? ಸಭಾಧ್ಯಕ್ಷರು ಕೊಡತಕ್ಕ ನಿರ್ಣಯ ಅದು ಕೆಲವು ಛಿಣಚಿಣುಠಿ ಹಿನ್ನಲೆಯಲ್ಲಿ ಇತಿಹಾಸದ ಹಿನ್ನಲೆಯಲ್ಲಿ ವಸ್ತುಸ್ಥಿತಿಯ ಆಧಾರದ ಮೇಲೆ ತಮ್ಮ ರೂಲಿಂಗ್ ಅನ್ನು ಮರುಪರಿಶೀಲನೆ ಮಾಡಿ ಎಂದು ಹೇಳುವುದಕ್ಕೆ ನಿಂತಾಗ ಅದೊಂದು ಐತಿಹಾಸಕವಾದ ತೀರ್ಮಾನ ಆಗುತ್ತದೆ. ಈ ಸದನಕ್ಕೆ 100 ವರ್ಷಗಳ ಇತಿಹಾಸವಿದೆ. ಇನ್ನೂ ನೂರಾರು ವರ್ಷಗಳ ಕಾಲ ಈ ಸದನದಲ್ಲಿ ಅದು ಇರಬೇಕಾಗುತ್ತದೆ, ಹಾಗಾಗಿ ಈಗ ನೀಡತಕ್ಕ ತೀರ್ಪು, ಚರ್ಚೆ ಒಂದು ಇತಿಹಾಸವನ್ನು ಸೃಷ್ಟಿ ಮಾಡುತ್ತದೆ ಎಂದು ನನಗನಿಸುತ್ತದೆ. ಅದಕೋಸ್ಕರ ವಿರೋಧ ಪಕ್ಷದವರು ಹಿಂದಕ್ಕೆ ಬಂದು ತಮ್ಮ ಸ್ಥಾನಗಳಲ್ಲಿ ಕುಳಿತುಕೊಂಡರೆ ಉತ್ತರ ನೀಡುವುದಕ್ಕೆ ನಾನು ತಯಾರಿದ್ದೇನೆ. ನಾನು ನೇರವಾಗಿ ಪ್ರಸ್ತಾಪ ಮಾಡುತ್ತೇನೆ, ಮಧ್ಯೆದಲ್ಲಿ ಯಾರಾದರೂ ಏನನ್ನಾದರೂ ಪ್ರಸ್ತಾಪ ಮಾಡುತ್ತೀರಿ., ಆಗ ಚರ್ಚೆ ಬೇರೆ ದಾರಿಯನ್ನು ಹಿಡಿಯುತ್ತದೆ. ಸದನದ ಘನತೆಯನ್ನು ಆ ಕುರ್ಚಿಯ ಘನತೆಯನ್ನು ನಾವೆಲ್ಲರೂ ಕಾಪಾಡಬೇಕು. ನಾವೆಲ್ಲರೂ ಸಹ ಸದನದಲ್ಲಿ ಕುಳಿತಿದ್ದೇವೆ, ಸಚಿವರು ಸಹ ಕುಳಿತಿದ್ದಾರೆ, ಈ ಸದನ, it is a creature of this House. ನಮ್ಮೆಲ್ಲರಕ್ಕಿಂತ ಎತ್ತರದ ಜಾಗದಲ್ಲಿ ತಾವು ಕುಳಿತಿದ್ದೀರಿ ಏಕೆ? ತಮ್ಮ ಮೇಲೆ ಮಹಾತ್ಮಗಾಂಧೀಜಿಯವರ ಪೊಟೋ ಇದೆ, ಹಾಗೆಯೇ ತಮ್ಮ ತಲೆಯ ಮೇಲೆ ಮಹಾನ್ ನಾಯಕರುಗಳ ಪೋಟೋಗಳನ್ನು ಹಾಕಿಕೊಂಡಿದ್ದೀರಿ. ಅವರ ಮಾರ್ಗದರ್ಶನದಂತೆ ಸಭೆಯನ್ನು ನಡೆಸಬೇಕಾಗುತ್ತದೆ. ಈ ಸಭೆ ಎಂದರೆ ಸಂವಿಧಾನದ ಪ್ರಕಾರ ಇಡೀ ರಾಷ್ಟ್ರವನ್ನು ಪ್ರತಿನಿಧಿಸತಕ್ಕದ್ದು, ಹಾಗೂ ರಾಜ್ಯವನ್ನು ಪ್ರತಿನಿಧಿಸತಕ್ಕ ಒಂದು ಸಭೆ, ಈ ಸಭೆಯ ಘನತೆಯ ಬಗ್ಗೆ ನಾವು ಎಷ್ಟು ಹೇಳಿದರೂ ಸಹ ಸಾಲದು. ದಯಮಾಡಿ ಇದೆಲ್ಲ ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಅದಕ್ಕೆ ಅಪಚಾರವಾಗುವ ರೀತಿಯಲ್ಲಿ ನಾವುಗಳು ನಡೆದುಕೊಳ್ಳುವುದು ಬೇಡ. ಇಲ್ಲಿ ನಿಯಮಾವಳಿಗಳನ್ನು ಕೂಡ ನಾವು ಸಂವಿಧಾನದ ಪ್ರಕಾರವಾಗಿಯೇ ಮಾಡಿದ್ದೇವೆ. ಆ ನಿಯಮಾವಳಿಗಳಿಗೆ ವಿರೋಧವಾಗಿ ಸದನ ಆರ್ಡರ್‌ನಲ್ಲಿ ಇಲ್ಲದಿದ್ದಾಗ ಚರ್ಚೆ ಮಾಡುವುದು ಎಷ್ಟು ಸೂಕ್ತ? ಎನ್ನುವುದು ನನ್ನ ಭಾವನೆ.

**ಸಭಾಪತಿಯವರು:–** ಆದ್ದರಿಂದಲೇ ಎಲ್ಲಾ ಮಾನ್ಯ ಸದಸ್ಯರುಗಳಿಗೂ ಸಹ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಕಾನೂನು ಸಚಿವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಸದನ ನೂರು ವರ್ಷಗಳ ಇತಿಹಾಸವನ್ನು ಹೊಂದಿರತಕ್ಕ ಮೇಲ್ಮನೆ. ಸಭಾಪತಿಯವರು ನೀಡತಕ್ಕ ರೂಲಿಂಗ್ ಆಯಾ ಸಂದರ್ಭಗಳಿಗೆ ತಕ್ಕಂತೆ ತನ್ನ ಪ್ರಭಾವವನ್ನು ಬೀರುತ್ತದೆ. ಅದನ್ನೆಲ್ಲ ನೋಡಿಕೊಂಡು ತಾವು ರೂಲಿಂಗ್ ನೀಡಬೇಕು, ಇದು

ಒಂದು ಇತಿಹಾಸವನ್ನು ಸೃಷ್ಟಿ ಮಾಡುತ್ತದೆ ಎನ್ನುವ ಮಾತನ್ನು ಕಾನೂನು ಸಚಿವರು ಹೇಳಿದ್ದಾರೆ. ಈ ಸದನದ ಬಗ್ಗೆ ಮತ್ತು ಸಭಾಪತಿಗಳ ಬಗ್ಗೆ ಅತಿ ಹೆಚ್ಚಿನ ಗೌರವವವನ್ನು ಹೊಂದಿರುವ ಬಗ್ಗೆ ಕೂಡ ಅವರು ಹೇಳಿದ್ದಾರೆ. ತಮ್ಮ ಪೀಠದ ಮೇಲೆ ಮಹಾತ್ಮಗಾಂಧೀಜಿಯವರ ಭಾವಚಿತ್ರ ಇರುವುದು, ಹಾಗೂ ಮಹಾಪುರುಷರ ಭಾವಚಿತ್ರಗಳಿರುವುದರ ಬಗ್ಗೆ ಎಲ್ಲಾ ಹೇಳಿದ್ದಾರೆ. ಅದು ಸತ್ಯ ಕೂಡ ಆಗಿದೆ. ಅದನ್ನೆಲ್ಲ ನಾವು ಒಪ್ಪಿದರೂ ಸಹ ನಾವು ಇಲ್ಲಿ ಧರಣಿಯನ್ನು ಏಕೆ ಮಾಡುತ್ತಿದ್ದೇವೆ ಎಂದರೆ ಅವರು ಕೊನೆಯಲ್ಲಿ ತಾವು ನೀಡಿರುವ ರೂಲಿಂಗ್ ಅನ್ನು ಮರುಪರಿಶೀಲನೆ ಮಾಡಬೇಕೆನ್ನುವ ಒಂದು ಮಾತನ್ನು ಹೇಳಿದರು, ಅವರು ಹೇಳಿದ ಎಲ್ಲಾ ವಿಚಾರಗಳ ಬಗ್ಗೆ ಕೂಡ ನನಗೆ ಸಹಮತವಿದೆ. ಹಾಗೆಯೇ ನಮ್ಮ ಪಕ್ಷದ ಸಹಮತ ಕೂಡ ಇದೆ. ನಮ್ಮ ವಿಚಾರ ಏನೆಂದರೆ ತಾವು ಈ ಒಂದು ರೂಲಿಂಗ್ ಅನ್ನು ನೀಡುವುದಕ್ಕೆ ಮುಂಚೆ 3 ಬಾರಿ ತಾವು ರೂಲಿಂಗ್ ನೀಡಿದ್ದೀರಿ, ಮೊದಲ ಬಾರಿಗೆ ರೂಲಿಂಗ್ ಕೊಟ್ಟಾಗಲೂ ಸಹ ಇದೇ ಕಾನೂನು ಸಚಿವರು ನಿಮ್ಮ ರೂಲಿಂಗ್ ಅನ್ನು ಮರುಪರಿಶೀಲನೆ ಮಾಡಬೇಕೆಂದು ಮನವಿಯನ್ನು ಮಾಡಿದರು. ಆಗ ಮರುಪರಿಶೀಲನೆ ಮಾಡುವ ಸಲುವಾಗ experts' opinion ಕೇಳುವುದಾಗಿ ಒಂದು ರೂಲಿಂಗ್ ತಾವು ನೀಡಿದರಿ. ಮೊನ್ನೆ ಸದನದ ಕೊನೆಯ ದಿವಸಗಳಲ್ಲಿ ಕೂಡ ಇನ್ನೇನು ರೂಲಿಂಗ್ ಕೊಡಬೇಕೆನ್ನುವ ಸಂದರ್ಭದಲ್ಲಿ ಎರಡು ಕಡೆಯ ಅಭಿಪ್ರಾಯಗಳನ್ನು ಕೇಳಿ ಹಾಗೆಯೇ ಅಡ್ವೋಕೇಟ್ ಜನರಲ್‌ರವರು ನೀಡಿರುವ ಪತ್ರವನ್ನು ಕೂಡ ಅಧ್ಯಯನ ಮಾಡಬೇಕೆಂದು ಆದ್ದರಿಂದ ಅಂದೇ ರೂಲಿಂಗ್ ನೀಡುವುದಕ್ಕೆ ಕಷ್ಟ ಆಗುತ್ತದೆ, ಆದ್ದರಿಂದ experts' opinion ಕೇಳಿ ರೂಲಿಂಗ್ ಕೊಡಬೇಕಾಗುತ್ತದೆ ಎನ್ನುವ ಮಾತನ್ನು ತಾವು ಕಳೆದ ಅಧಿವೇಶನದಲ್ಲಿ ಹೇಳಿದಿರಿ. ಸೋಮವಾರ ಕೂಡ ನಾವು ಈ ವಿಚಾರವನ್ನು ಪ್ರಸ್ತಾಪಿಸಿದ ಸಂದರ್ಭದಲ್ಲಿ ತಾವು ಎಲ್ಲಾ expertಗಳ ಅಭಿಪ್ರಾಯವನ್ನು ಪಡೆದುಕೊಂಡು ಸರ್ಕಾರ ಅನ್ವರ್ ಮಾನಪ್ಪಾಡಿಯವರ ವರದಿಯನ್ನು ಮಂಡನೆ ಮಾಡಬೇಕು ಎನ್ನುವ ರೂಲಿಂಗ್ ಅನ್ನು ತಾವು ನೀಡಿದಿರಿ. ತಾವು ರೂಲಿಂಗ್ ಕೊಟ್ಟ ನಂತರ ನಾವು ಕೇಳಿದಂತಹ ಸಂದರ್ಭದಲ್ಲಿ ಸಭಾನಾಯಕರು ಈ ವಿಚಾರವನ್ನು ಕಾನೂನು ಸಚಿವರ ಗಮನಕ್ಕೆ ತಂದಿದ್ದೇವೆ, ಅವರು ಬಂದು ಅದರ ಬಗ್ಗೆ ಉತ್ತರ ಕೊಡುತ್ತಾರೆ ಎಂದು ಹೇಳಿದರು. ನಾನು ಅದನ್ನೇ ಒಪ್ಪುತ್ತೇನೆ. ಅವರು ಹೇಳಿದ್ದನ್ನೇ ನಾನು ಹೇಳುತ್ತಿದ್ದೇನೆ, ಹೊಸದಾಗಿ ಏನನ್ನು ಹೇಳುತ್ತಿಲ್ಲ. ಆದರೆ ಮುಖ್ಯಮಂತ್ರಿಗಳು ಬಂದು ಏನು ಹೇಳಿದರು, ನಾವು ಈ ವರದಿಯನ್ನು ಸಚಿವಸಂಪುಟದಲ್ಲಿ ತಿರಸ್ಕಾರ ಮಾಡಿದ್ದೇವೆ. ಹಾಗಾಗಿ ಕಾನೂನು ಸಚಿವರು ಇದರ ಬಗ್ಗೆ ಉತ್ತರವನ್ನು ನೀಡುತ್ತಾರೆ ಎಂದು ಹೇಳಿದಾಗ ನಮಗೆ ಬಹಳ ಆಶ್ಚರ್ಯ ಆಯಿತು. ತಾವು ತೀರ್ಪು ಕೊಟ್ಟ ನಂತರ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಿದರು. ತಾವು ವರದಿ ಮಂಡನೆ ಮಾಡಿ ಎಂದು ರೂಲಿಂಗ್ ಕೊಟ್ಟ ನಂತರ ಮುಖ್ಯಮಂತ್ರಿಗಳು ಈ ಮಾತನ್ನು ಹೇಳಿದರು. ತಾವು ವರದಿಯನ್ನು ಮಂಡಿಸಿ ಎಂದು ನೀಡಿರುವ ರೂಲಿಂಗ್ ಅನ್ನು ತಿರಸ್ಕಾರ ಮಾಡುವ ಅಧಿಕಾರ ಸಚಿವಸಂಪುಟಕ್ಕೆ ಇದೆಯೇ? ಇದು ನನಗೆ ಗೊತ್ತಿಲ್ಲ. ಅದಕೋಸ್ಕರವೇ ನಾನು ಇದನ್ನು ಕಾನೂನು ಸಚಿವರಿಗೆ ಕೇಳುತ್ತಿದ್ದೇನೆ. ಇಲ್ಲಿ ತಮ್ಮ ಪೀಠವೇ ಉತ್ಕೃಷ್ಟ ಸಚಿವಸಂಪುಟಕ್ಕಿಂತ ಮುಖ್ಯಮಂತ್ರಿ ಸ್ಥಾನಕ್ಕಿಂತ ಹಾಗೂ ಕಾನೂನು ಸಚಿವರಿಗಿಂತಲೂ ಕೂಡ ನಿಮ್ಮ ಪೀಠ ಉತ್ಕೃಷ್ಟ ಎಂದು ನನ್ನ 20–24 ರಾಜಕೀಯ ವರ್ಷಗಳ ಅನುಭವದಿಂದ ತಿಳಿದುಕೊಂಡಿದ್ದೇನೆ. ಸಭಾಪತಿ ಹಾಗೂ ಸಭಾಧ್ಯಕ್ಷರ ಪೀಠ ಅಂತಿಮ ಎಂದು ನಾನು ಅಂದುಕೊಂಡಿದ್ದೇನೆ. ಈಗ ಕಾನೂನು ಸಚಿವರು ಇದರ ಬಗ್ಗೆ ಮರುಪರಿಶೀಲನೆ ಮಾಡಿ ಎನ್ನುವ ವಿಚಾರವನ್ನು ತಮ್ಮಲ್ಲಿ ಹೇಳುತ್ತಿದ್ದಾರೆ.

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಸಭಾಪತಿಗಳೇ, ಈಗ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸರ್ಕಾರದ ಪರವಾಗಿ ಚರ್ಚೆ ಮಾಡುತ್ತಾರೆ. ಅದು 100 ವರ್ಷಗಳ ಇತಿಹಾಸ ಇರುವಂತಹ ಈ ಸದನದಲ್ಲಿ ನಡೆಯುವ ಒಂದು ಚಾರಿತ್ರಿಕವಾದ ಚರ್ಚೆ. ಒಂದು ಐತಿಹಾಸಿಕವಾದ ಚರ್ಚೆ. ಹೊಸ ದಿಕ್ಕುದೆಸೆಗಳಿಗೆ ಮಾರ್ಗದರ್ಶನ ನೀಡುವಂತಹ ಒಂದು ಮಹತ್ವವಾದ ಚರ್ಚೆ. ಈ ತೀರ್ಪಿನ ಮೇಲೂ ಸಹ ಚರ್ಚೆ ನಡೆಯುತ್ತದೆ. ಅನ್ವರ್ ಮಾನಪ್ಪಾಡಿಯವರ ಬಗ್ಗೆ ಕೂಡ ಬಹಳ ಸುದೀರ್ಘವಾದ ಚರ್ಚೆ ನಡೆಯುತ್ತದೆ. ನಾವೇ ಮಾಡಿಕೊಂಡಿರುವ ಕಾನೂನಾನ್ಮಕ rules and

regulations ಗಳಿಗೆ ಒಳಪಟ್ಟು ಕಾನೂನಿನ ಚೌಕಟ್ಟಿನಲ್ಲಿ ಸಂವಿಧಾನತ್ಮಕವಾದ ಚೌಕಟ್ಟಿನಲ್ಲಿ ಬಹಳ ಮಹತ್ವವಾದ ಐತಿಹಾಸಿಕವಾದ ಚಾರಿತ್ರಿಕವಾದ ಒಂದು ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಸದನಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ, ಎಲ್ಲಾ ಗೌರವಾನ್ವಿತ ವಿರೋಧ ಪಕ್ಷದಗಳ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಬೇಕು, ಈ ಮಹತ್ವದ ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು, ಬಹುತರವಾಗಿ ಈ ಸದನದಲ್ಲಿ ನಡೆಯಲಾರದ ಒಂದು ಚರ್ಚೆ ಇವತ್ತು ನಡೆಯುತ್ತಿದೆ. ಅದಕ್ಕೆ ಎಲ್ಲಾ ರೀತಿಯ ಕಾನೂನಗಳು ಸಂವಿಧಾನತ್ಮಕ ವ್ಯವಸ್ಥೆ ಏನಿದೆ, ಅದರ ಬಗ್ಗೆ ಬಹಳ ಅರ್ಥಪೂರ್ಣವಾದಂತಹ ಚಾರಿತ್ರಿಕವಾದ ಚರ್ಚೆ ನಡೆಯತಕ್ಕ ಸಂದರ್ಭದಲ್ಲಿ House order ನಲ್ಲಿ ಇರಲಾರದ ಸಂದರ್ಭದಲ್ಲಿ ಮಾನ್ಯ ಸಚಿವರು ಮಾತನಾಡುವಾಗ ಬಾವಿಯಲ್ಲಿದ್ದವರು ಮಧ್ಯೆದಲ್ಲಿ ಬಾಯಿ ಹಾಕುತ್ತಾರೆ. ಆಗ ಮಾತನಾಡಿದ್ದು ಕಡತಕ್ಕೆ ಹೋಗುವುದಿಲ್ಲ. ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೂ ಅರ್ಥವಾಗದ ಒಂದು ಪರಿಸ್ಥಿತಿ ಸಂದಿಗ್ಧ ಸ್ಥಿತಿ ಉದ್ಭವ ಆಗುತ್ತದೆ. ಆದ್ದರಿಂದ ಎಲ್ಲಾ ಮಾನ್ಯ ಸದಸ್ಯರುಗಳಲ್ಲಿ ನನ್ನ ಮನವಿ ಏನೆಂದರೆ 100 ವರ್ಷಗಳ ಇತಿಹಾಸದಲ್ಲಿ ನಡೆಯಲಾರದ ಅತ್ಯಂತ ಮಹತ್ವಪೂರ್ವ ಚಾರಿತ್ರಿಕ ಚರ್ಚೆ ನಡೆಯಬೇಕಾದ ಹಿನ್ನಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಎಲ್ಲಾ ಸದಸ್ಯರುಗಳಿಗೆ ತಮ್ಮ ಸ್ಥಾನಗಳಿಗೆ ತೆರಳುವಂತೆ ಹೇಳಬೇಕೆಂದು ಮನವಿಯನ್ನು ಮಾಡಿಕೊಳ್ಳುತ್ತೇನೆ. ಅವರಿಗೆ ನಮ್ಮ ಉತ್ತರದಿಂದ ತೃಪ್ತಿ ಆಗದಿದ್ದರೆ ಅವರಿಗೆ ಸಂವಿಧಾನದ ಇವೆ, ಅವೆಲ್ಲವನ್ನು ಪ್ರಯೋಗ ಮಾಡಲಿ. ಅದನ್ನೆಲ್ಲ ನಾವು ಸ್ವಾಗತ ಮಾಡುತ್ತೇವೆ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಸದಸ್ಯರುಗಳಿಗೆ ದಯಮಾಡಿ ತಮ್ಮ ಸ್ಥಾನಗಳಿಗೆ ತೆರಳುವಂತೆ ಹೇಳಬೇಕು. ಎಲ್ಲಾ ತಮ್ಮ ಸ್ಥಾನಗಳಿಗೆ ಬರಲಿ, ಈ ಚರ್ಚೆ ನಡೆಯಲಿ. ಇದೇ ರೀತಿ ಕಾಲ ಹರಣ ಮಾಡುವುದು ಸೂಕ್ತವಲ್ಲ. ಮೊನ್ನೆಯು ಇದೆ ರೀತಿ ಕಾಲಹರಣವಾಯಿತು. ಮತ್ತು ಇವತ್ತು ಅದೇ ರೀತಿಯಾಗುವುದು ಸರಿಯಲ್ಲ. ಇದು ಪವಿತ್ರವಾದ ಸದನ. 40 ವರ್ಷಗಳ ಇತಿಹಾಸದಲ್ಲಿ ಕಾಣದಂತಹ ಭೀಕರ ಬರಗಾಲ ಬಂದಿದೆ. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ, ಅನೇಕ ಸಮಸ್ಯೆಗಳು ರಾಜ್ಯದಲ್ಲಿ ಉದ್ಭವಿಸಿವೆ. ಇದಕ್ಕೆ ಆದಷ್ಟು ಬೇಗ ಒಂದು ಕಾಯಕಲ್ಪ ಕಲ್ಪಿಸೋಣ. ಇದಕ್ಕೆ ಒಂದು ಕೊನೆ ಹೇಳೋಣ. ಮತ್ತೊಮ್ಮೆ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಎಲ್ಲರೂ ತಮ್ಮ-ತಮ್ಮ ಸ್ಥಾನಗಳಿಗೆ ಬರಬೇಕು. ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸಭಾನಾಯಕರ ಮಾತಿಗೆ ನಾವು ಬೆಲೆ ಕೊಡುತ್ತೇವೆ.

**ಶ್ರೀ ಆರ್.ವಿ.ವೆಂಕಟೇಶ್:-** ಮಾನ್ಯ ಸಭಾಪತಿಗಳೆ, ದಿನಗಳು ಇದರಲ್ಲಿಯು ಹೋಗುತ್ತಿವೆ. ದಯಮಾಡಿ ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಬೇಕು. ಪ್ರಶ್ನೋತ್ತರವಾದ ಮೇಲೆ ಈ ಚರ್ಚೆಯಾಗಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋ.ಮಧುಸೂದನ್:-** ಮಾನ್ಯ ಸಭಾಪತಿಗಳೆ, ಮಾನ್ಯ ಕಾನೂನು ಸಚಿವರು ತಾವು ಕೊಟ್ಟಿರುವ ನಿರ್ಣಯವನ್ನು ಪುನರ್ ವಿಮರ್ಶೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದಾರೆ. ಇದೇ ನಾಟಕವನ್ನು ಈಗಾಗಲೆ ಎರಡು ಬಾರಿ ಮಾಡಿದ್ದಾರೆ. ಪುನರ್ ವಿಮರ್ಶೆಯನ್ನು ಎರಡು ಬಾರಿ ಕೇಳಿದ್ದಾರೆ. ಎರಡು ಬಾರಿ ತಮ್ಮ ಘನಪೀಠದಿಂದ ಸರ್ಕಾರಕ್ಕೆ ಅತ್ಯಂತ ಸೂಕ್ತವಾದಂತಹ, ಅತ್ಯಂತ ನಿರ್ವಿವಾದಂತಹ ತೀರ್ಪನ್ನು ಕೊಟ್ಟಿದ್ದಿರಿ. ಕಳೆದ ಬಾರಿ ಸರ್ಕಾರ ಹೇಳಿದು, ನಮಗೆ ಅಡ್ವೋಕೇಟ್ ಜನರಲ್‌ರವರು ಒಂದು ಹೊಸ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ತಾವು ಸದನದಲ್ಲಿ ನಿರ್ಣಯವನ್ನು ಕೊಡಬಾರದು ಎಂದು ತಮ್ಮ ಮುಂದೆ ವಿಷಯವನ್ನು ಮಂಡಿಸಿದರು. ಅದು ಆದ ಮೇಲೆ ಸೋಮವಾರ ಬೆಳಗ್ಗೆ ತಾವು ಅತ್ಯಂತ ನಿರ್ವಿವಾದಂತಹ, ಯಾವುದೆ ರೀತಿಯ ಅನುಮಾನವಿಲ್ಲದಂತಹ ಇಡೀ calendar of events ಏನೇನು ನಡೆದಿದೆ ಎಲ್ಲವನ್ನು ಉಲ್ಲೇಖಿಸಿ ನನಗೆ ಸಂಪೂರ್ಣ ಮನವರಿಕೆಯಾಗಿದೆ, ಸರ್ಕಾರ ಇಂದು ವರದಿಯನ್ನು in its entirety ಮಂಡಿಸಬೇಕು ಎನ್ನುವಂತಹ ಆದೇಶವನ್ನು ತಾವು ಕೊಟ್ಟಿದ್ದೀರಿ. ಈಗ ಸರ್ಕಾರಕ್ಕೆ ಮತ್ತೆ ಪುನರ್ ವಿಮರ್ಶೆಗೆ ಅವಕಾಶವನ್ನು ಕೇಳುವ ಅಧಿಕಾರವೆ ಇಲ್ಲ.

**ಶ್ರೀ ಆರ್.ವಿ.ವೆಂಕಟೇಶ್:–** ಇದನ್ನು ಕೇಳಿ–ಕೇಳಿ ನಮ್ಮ ಕಿವಿ ಹೋಗಿವೆ. ಇಂದು ಕಾನೂನು ಸಚಿವರು ಬಂದಿದ್ದಾರೆ ಅವರು ಏನು ಹೇಳುತ್ತಾರೆ ಎನ್ನುವುದನ್ನು ಮೊದಲು ಕೇಳಲಿ. ಒಬ್ಬರು ಆದ ಮೇಲೆ ಒಬ್ಬರು ಅದನ್ನೆ ಹೇಳುತ್ತಿದ್ದಾರೆ. ಈಗ ಪ್ರಶ್ನೋತ್ತರ ತೆಗೆದುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಗೋ.ಮಧುಸೂದನ್:–** ಆ ವರದಿಯಲ್ಲಿ ಅವರ ಪಕ್ಷದ ದೊಡ್ಡ–ದೊಡ್ಡ ವ್ಯಕ್ತಿಗಳ ಹೆಸರುಗಳು ಇವೆ. ಆ ಎಲ್ಲ ಹೆಸರುಗಳನ್ನು ಮುಚ್ಚಿ ಹಾಕುವಂತಹ, 52 ಸಾವಿರ ಎಕರೆ ಭೂ ಹಗರಣವನ್ನು ಮುಚ್ಚಿ ಹಾಕಲು, 15 ಲಕ್ಷ ಕೋಟಿ ರೂ.ಗಳ ಅವ್ಯವಹಾರವನ್ನು ಮುಚ್ಚಿ ಹಾಕಲು ಮತ್ತೆ ಈ ಪುನರ್ ವಿಮರ್ಶೆ ಎನ್ನುವ ಬಿಸನೆಸ್ ಮಾಡುತ್ತಿದ್ದಾರೆ.

**ಸಭಾಪತಿಯವರು:–** ಸದನದಲ್ಲಿ ಶಾಂತ ವಾತಾವರಣ ನಿರ್ಮಾಣ ಮಾಡಲು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ(ಸಭಾನಾಯಕರು):–** ಮಾನ್ಯ ಸಭಾಪತಿಗಳೆ, ಕಾನೂನು ಸಚಿವರು ಬಂದಿರುವುದಿಲ್ಲ ಎಂದು ಮೊನ್ನೆ ಸದನ ನಡೆಯಲು ಬಿಡಲಿಲ್ಲ. ಇವತ್ತು ಕಾನೂನು ಸಚಿವರು ಬಂದಿದ್ದಾರೆ ಆದರೂ ಸದನ ನಡೆಯಲು ಬಿಡುತ್ತಿಲ್ಲ ಇವರು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಬಾಪತಿಯವರೇ ವರದಿಯನ್ನು ಮಂಡಿಸುತ್ತಾರೊ ಇಲ್ಲವೊ ಎನ್ನುವುದನ್ನು ಹೇಳಿ ಬಿಡಲಿ.

**(ಗೊಂದಲ)**

**ಶ್ರೀ ಎಸ್.ಆರ್.ಪಾಟೀಲ್:–** ಈ ರಾಜ್ಯದ ಜನತೆ ಬಗ್ಗೆ ನಿಮಗೆ ಕಾಳಜಿ ಇಲ್ಲ, ಇವತ್ತು ಕಾನೂನು ಸಚಿವರು ಸದನಕ್ಕೆ ಬಂದಿದ್ದಾರೆ, ಅವರು ಉತ್ತರ ಕೊಡಲು ತಯಾರಾಗಿದ್ದಾರೆ. ಆದರೂ ಕೂಡಾ ಸದನದಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ. They are not ready to hear the Law Minister. They are intentionally trying to stall the proceedings of this House.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಬಾಪತಿಯವರೇ ವರದಿಯನ್ನು ಮಂಡಿಸುತ್ತಾರೊ ಇಲ್ಲವೊ ಎನ್ನುವುದನ್ನು ಹೇಳಿಬಿಡಲಿ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್**(ಬಾವಿಯಲ್ಲಿ ನಿಂತು ಮಾತನಾಡಿದರು)**:–** ಅದು ನಮ್ಮ ಹಕ್ಕು.

**ಶ್ರೀ ಆರ್.ವಿ.ವೆಂಕಟೇಶ್:–** ಏನು ನಿಮ್ಮ ಹಕ್ಕು? ಸಚಿವರು ಉತ್ತರ ಕೊಡಬಾರದೆ? ಅದನ್ನು ಕೇಳುವ ತಾಳ್ಮೆ ಇಲ್ಲ. ನಾಟಕ ಮಾಡುತ್ತೀರಾ?

**ಶ್ರೀ ವೀರಣ್ಣ ಮತ್ತೀಕಟ್ಟಿ:–** ಮಾನ್ಯ ಕಾನೂನು ಸಚಿವರು ಉತ್ತರ ಹೇಳುತ್ತಾರೆ ಬಿಡಿ.

**(ಗೊಂದಲ)**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಸಭಾಪತಿಗಳೆ, ಇದು ಆಡಳಿತ ಪಕ್ಷದ ವಿರೋಧ ಪಕ್ಷದ ಮಧ್ಯೆ ಬಂದಿರುವ ಸಂಘರ್ಷವಲ್ಲ. ಮಾನ್ಯ ಸಭಾಪತಿಗಳು ತಮ್ಮ ಪೀಠದಿಂದ ಕೊಟ್ಟಿರುವ ತೀರ್ಪಿಗೆ.... ಇದು ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಹೇಳಿದ್ದಾರೆ. ಸರ್ಕಾರದ ಜವಾಬ್ದಾರಿಯಂತೆ ಕಾನೂನು ಪ್ರಕಾರ ನಡೆದಿದೆ ಇಲ್ಲವೆ ಎನ್ನುವುದನ್ನು ಮನವರಿಕೆ ಮಾಡುವಂತಹ ವಿಚಾರ ನಮಗೆ ತಮಗೆ ಬಿಟ್ಟಿರುವಂತದ್ದು. ಇವರು ಮಧ್ಯೆದಲ್ಲಿ ...

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಕಾರ್ಯ ಕಲಾಪಗಳ ಸಲಹಾ ಸಮಿತಿಯಲ್ಲಿ ವರದಿ ಮಂಡಿಸಬೇಕೆಂದು ತೀರ್ಮಾನವಾಗಿದೆ. They have filed an affidavit before the court saying that they are going to place the report. ತಾವು ವರದಿಯನ್ನು ಮಂಡಿಸಿ ಎಂದು ತೀರ್ಪನ್ನು ಕೊಟ್ಟಿದ್ದಿರಿ. ಇನ್ನೇನು ಇವರು ಮರು ಪರಿಶೀಲನೆ ಕೇಳಬೇಕು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ಈ ರೀತಿ ಮಾತನಾಡಿದರೆ ಉತ್ತರವನ್ನು ಹೇಗೆ ಹೇಳಬೇಕು?

**ಶ್ರೀ ಟಿ.ಬಿ.ಜಯಚಂದ್ರ:–** ನಮ್ಮ ಮುಂದೆ ಎರಡು ಪ್ರಶ್ನೆಗಳು ಇವೆ.

**ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರು ಏನೊ ಹೇಳುತ್ತಾರೆ ಕೇಳೋಣ. ಸದನ ನಡೆಸುವಂತಹ ವಾತಾವರಣ ನಿರ್ಮಾಣವಾಗಬೇಕು.

(ಗೊಂದಲ)

**ಶ್ರೀ ಎಸ್.ಆರ್.ಪಾಟೀಲ್:–** ನಿಮ್ಮ ಕಾನೂನಿನ ಅಜ್ಞಾನದ ಪ್ರದರ್ಶನವಾಗುತ್ತಿದೆ. ಹೇಗೆ ವಿಲಿವಿಲಿ ಎಂದು ಒತ್ತಾಡುತ್ತೀರಿ ನೀವು ಎನ್ನುವುದು ಗೊತ್ತಾಗುತ್ತದೆ ಇರಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಕಾನೂನನ್ನು ಕೆಳಗೆ ಹಾಕಿ ತುಳಿಯುತ್ತಿದ್ದಿರಿ.

**ಶ್ರೀ ಗೋ.ಮಧುಸೂದನ್:–** ಇದು ನಿಮ್ಮ ಅಪ್ರಮಾಣಿಕತೆಯ ಪ್ರದರ್ಶನ.

(ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಈ ವಿಷಯ ಕಳೆದ ಒಂದು ವಾರದಿಂದ ನಡೆಯುತ್ತಿದೆ. ಕಳೆದ ಬಾರಿ ತಾವು ಆ ಪೀಠದಿಂದ, ನಾನು ಇದರ ಬಗ್ಗೆ ವಿಮರ್ಶೆ ಮಾಡುತ್ತೇನೆ, ಕಾನೂನಾತ್ಮಕವಾಗಿ ಇದರ ಬಗ್ಗೆ ತೀರ್ಮಾನ ಮಾಡಬೇಕು, ಅದಕ್ಕಾಗಿ ಬೇರೆ–ಬೇರೆಯವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ಅಭಿಪ್ರಾಯವನ್ನು ಪಡೆದು ಒಂದು ತೀರ್ಪನ್ನು ಕೊಟ್ಟಿದ್ದಿರಿ. ಸರ್ಕಾರವು ಕೂಡಾ ಮಂಡನೆ ಮಾಡುತ್ತೇವೆ ಎಂದು ಹೇಳಿ, ಮೊನ್ನೆಯು ಮೂರು ಗಂಟೆಗೆ ಬರುತ್ತಾರೆ ಮಂಡಿಸುತ್ತಾರೆ ಎಂದು ಹೇಳುತ್ತಲೆ ಬಂದಿದೆ. ಸರ್ಕಾರ ಈಗಾಗಲೆ ಇದರ ಬಗ್ಗೆ ವರದಿಯನ್ನು ತೆಗೆದುಕೊಂಡಿದೆ. ಅದನ್ನು ಕ್ಯಾಬಿನೆಟ್‌ನಲ್ಲಿ ಇಟ್ಟು ರಿಜೆಕ್ಟ್ ಮಾಡಲಾಗಿದೆ. ಅದನ್ನು ಇಲ್ಲಿ ಮಂಡನೆ ಮಾಡಲು ಏನು ತೊಂದರೆ?

**ಶ್ರೀ ಎಸ್.ಆರ್.ಪಾಟೀಲ್:–** ಆ ವಿಚಾರವನ್ನೆ ಈಗ ಹೇಳುತ್ತಿದ್ದಾರೆ.

**ಶ್ರೀ ಪುಟ್ಟಣ್ಣ:–** ಇದು ನನ್ನ ಅಭಿಪ್ರಾಯ ಅದನ್ನು ಒಪ್ಪುವುದು ಬಿಡುವುದು ನಿಮಗೆ ಬಿಟ್ಟಿರುವ ವಿಚಾರ. ಸರ್ಕಾರಕ್ಕೆ ಪೂರ್ಣ ಅಧಿಕಾರವಿದೆ. ಆದರೆ ಇಲ್ಲಿ ಮಂಡನೆ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಿರಿ. ಕ್ಯಾಬಿನೆಟ್‌ನಲ್ಲಿ ರಿಜೆಕ್ಟ್ ಮಾಡಿದ್ದೀರಿ. ರಿಜೆಕ್ಟ್ ಮಾಡಿರುವುದನ್ನು ಇಲ್ಲಿ ಸಬ್‌ಮಿಟ್ ಮಾಡಿ. ಇದನ್ನು ಮಂಡನೆ ಮಾಡಲು ಎಷ್ಟು ದಿನಗಳು ಬೇಕು?

**ಶ್ರೀ ಎಸ್.ಆರ್.ಪಾಟೀಲ್:–** ಮಾನ್ಯ ಪುಟ್ಟಣ್ಣನವರೆ ಮಾನ್ಯ ಕಾನೂನು ಸಚಿವರು ಅದರ ಬಗ್ಗೆಯೇ ಹೇಳಲು ನಿಂತಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಸದನದಲ್ಲಿ ಚರ್ಚೆ ಮಾಡಲು ನಾವು ವಿಷಯಗಳನ್ನು ಕೊಟ್ಟಿದ್ದೆವೆ. ಆದರೆ ನಮ್ಮ ವಿಷಯಗಳು ಬರುತ್ತಲೆ ಇಲ್ಲ. ನಮಗೂ ನೋವು ಇದೆ, ಇದೊಂದನ್ನೆ ಇಟ್ಟುಕೊಂಡು ಆಟ ಆಡಲು ನಾವು ಇಲ್ಲಿ ಬಂದಿಲ್ಲ. ತಾವು ತಮ್ಮ ಪೀಠದಿಂದ ಒಂದು ಆದೇಶವನ್ನು ಕೊಟ್ಟಿದ್ದೀರಿ. ಸರ್ಕಾರವು ಅದಕ್ಕೆ ಒಪ್ಪಿಕೊಂಡಿದೆ. ಈ ಹಂತದಲ್ಲಿ ಮತ್ತೆ ಪುನರ್ ವಿಮರ್ಶೆ ಮಾಡಿ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಸರ್ಕಾರ ವರದಿ ಮಂಡನೆ ಮಾಡುವುದಿಲ್ಲ ನೀವು ಕಾನೂನಾತ್ಮಕವಾಗಿ ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ ತೆಗೆದುಕೊಳ್ಳಿ ಎಂದು ಹೇಳಬೇಕು. ಇಲ್ಲದಿದ್ದರೆ ಕ್ಯಾಬಿನೆಟ್‌ನಲ್ಲಿ ರಿಜೆಕ್ಟ್ ಮಾಡಿರುವುದನ್ನೆ ಮಂಡಿಸುತ್ತೇವೆ ಎಂದು ಹೇಳಬೇಕು. ಯಾವುದಾದ್ದರೂ ಒಂದು ತೀರ್ಮಾನಕ್ಕೆ ಬರಬೇಕು. ಈ ರೀತಿ ಸರ್ಕಾರದ ನಡೆ ಒಳ್ಳೆಯದಲ್ಲ.

**ಸಭಾಪತಿಯವರು:–** ಈ ರೀತಿ ಸದನ ನಡೆಯುವುದು ಸರಿಯಲ್ಲ. ಧರಣಿ ನಿರಂತರ ತಮ್ಮ ಸ್ಥಾನಗಳಿಗೆ ವಾಪಸ್ ಬರಬೇಕು. ಸದನ ನಡೆಸಲು ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ವರದಿ ಮಂಡಿಸಿ ಎಂದು ಸರ್ಕಾರಕ್ಕೆ ರೂಲಿಂಗ್ ಕೊಟ್ಟಿದ್ದಿರಿ. ಮತ್ತೆ–ಮತ್ತೆ ರೂಲಿಂಗ್ ಕೊಡುವ ಅವಶ್ಯಕತೆ ಇಲ್ಲ. ವರದಿಯನ್ನು ಮಂಡಿಸುತ್ತಾರೊ ಇಲ್ಲವೊ ಅಷ್ಟನ್ನು ಹೇಳಲಿ. ಮಾನ್ಯ ಪುಟ್ಟಣ್ಣನವರು ಹೇಳಿರುವುದು ಸರಿ ಇದೆ. ವರದಿ ಮಂಡಿಸುತ್ತೇವೆ ಎಂದು ಹೇಳಲಿ, ಅಥವಾ ಇಲ್ಲ ಎಂದು ಹೇಳಲಿ.

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ್:–** ಇವರು ಸದನ ನಡೆಸಲು ಬರುತ್ತಿಲ್ಲ, ಈ ರೀತಿ ದಬ್ಬಾಳಿಕೆ ಮಾಡುವುದು ಸರಿಯಲ್ಲ ಅದು.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾವು ಬಂದಾಗಿನಿಂದ ಕೇಳುತ್ತಿದ್ದೆವೆ. ಇದೇನಾ ಮೇಲ್ಮನೆ ಎನ್ನುವ ಅನುಮಾನ ಬಂದಿದೆ. ಸರ್ಕಾರ ತಮ್ಮ ರೂಲಿಂಗ್‌ನ್ನು ಪರಿಪಾಲನೆ ಮಾಡುತ್ತದೆಯೇ ಇಲ್ಲವೆ? ವರದಿಯನ್ನು ಮಂಡನೆ ಮಾಡುತ್ತಾರೊ ಇಲ್ಲವೊ? ಸದನ ಸಲಹಾ ಸಮಿತಿ ಹೇಳಿದ ಹಾಗೆ ಕೇಳುತ್ತಾರೊ ಇಲ್ಲವೊ? ಕೋರ್ಟ್‌ಗೆ affidavit ಕೊಟ್ಟ ಹಾಗೆ ಮಾಡುತ್ತಾರೊ ಇಲ್ಲವೊ? ಇಷ್ಟೆ ಹೇಳಬೇಕು.

**ಶ್ರೀ ಟಿ.ಬಿ.ಜಯಚಂದ್ರ:–** ಇದು ಪಂಚಾಯಿತಿ ಕಟ್ಟೆಯಲ್ಲಿ ಕುಳಿತುಕೊಂಡು ತೀರ್ಮಾನ ಮಾಡುವಂತಹ ವಿಚಾರವಲ್ಲ. ಸಂವಿಧಾನ ಕೊಟ್ಟಿರುವಂತಹ ನಿಯಮಗಳಲ್ಲಿ ಕೆಲಸ ಮಾಡಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:–** ತೀರ್ಪು ಕೊಟ್ಟಾಗಿದೆ. ಸರ್ಕಾರ ಅದರ ಪ್ರಕಾರ ನಡೆದುಕೊಳ್ಳಬೇಕಾಗಿದೆ.

**ಸಭಾಪತಿಯವರು:–** ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗುತ್ತದೆ.

**(ಅಪರಾಹ್ನ 11.48 ಗಂಟೆಗೆ 10 ನಿಮಿಷಗಳ ಕಾಳ ಮುಂದೂಡಲ್ಪಟ್ಟ ಸದನವು ಪುನಃ 12 ಗಂಟೆ 20 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಗಳು ಪೀಠವನ್ನು ಅಲಂಕರಿಸಿದರು)**

ಭಾರತೀಯ ಜನತಾ ಪಕ್ಷದ ಸದಸ್ಯರಿಂದ ಮುಂದುವರೆದ ಧರಣಿ )

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಮಾನ್ಯ ಕಾನೂನು ಸಚಿವರು ಕಾನೂನಿನ ಪರಿಪಾಲನೆ ಮಾಡಲಿ. ಇಲ್ಲ, ನಾನು ಕಾನೂನಿನ ಪರಿಪಾಲನೆ ಮಾಡುವುದಿಲ್ಲ ಎಂದು ಹೇಳುವುದಾದರೆ ರಾಜೀನಾಮೆ ಕೊಡಲಿ. ಕಾನೂನು ಮಂತ್ರಿಗಳು, ನಾನು ಕಾನೂನಿನ ಪರಿಪಾಲನೆ ಮಾಡುತ್ತೇನೆ, ಸಭಾಪತಿಯವರ ಮಾತನ್ನು ಕೇಳುತ್ತೇನೆ ಎಂದು ವರದಿ ಮಂಡನೆ ಮಾಡಲಿ. ಇಲ್ಲದಿದ್ದರೆ, ನನಗೆ ಕಾನೂನು ಪರಿಪಾಲನೆ ಮಾಡುವುದಕ್ಕಾಗುವುದಿಲ್ಲ ಎನ್ನುವುದಾದರೆ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತೇನೆ ಎಂದು ಹೇಳಲಿ. . .

(ಈ ಹಂತದಲ್ಲಿ ಮಾನ್ಯ ಮಧುಸೂದನ್‌ರವರು ತಮ್ಮ ಸ್ಥಾನಕ್ಕೆ ತೆರಳಿದರು)

**ಶ್ರೀ ಗೋ.ಮಧುಸೂದನ್:–** ಅವರು ಕೇವಲ ಕಾನೂನು ಮಂತ್ರಿಗಳಲ್ಲ, ಸಂಸದೀಯ ವ್ಯವಹಾರಗಳ ಸಚಿವರೂ ಕೂಡ ಆಗಿದ್ದಾರೆ . . .

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–**ಕಾನೂನು ಮತ್ತು ಸಂಸದೀಯ ವ್ಯವಹಾರ ಈ ಎರಡನ್ನೂ ಇಟ್ಟುಕೊಂಡು ಕುಳಿತಿದ್ದೀರಿ. ಇಟ್ಟುಕೊಂಡು ಏನು ಮಾಡುತ್ತೀರಿ? ಮಾನ್ಯ ಜಯಚಂದ್ರರವರು ಏನು ಮಾಡುತ್ತಾರೆ ಎಂದು ಇಡೀ ರಾಜ್ಯವೇ ನೋಡುತ್ತಿದೆ. . .

**ಡಾ:ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಗಳೆ, ನನ್ನದೊಂದು ವಿನಂತಿ ಇದೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಮೊನ್ನೆ ತನಕ ಕೂಡ 4 ಗಂಟೆಗೆ, 3 ಗಂಟೆಗೆ, 2 ಗಂಟೆಗೆ ಮಂಡಿಸುತ್ತೇವೆ ಎಂದು ಹೇಳಿದರು. ಈಗ ನೋಡಿದರೆ ಮರುಪರಿಶೀಲನೆ ಮಾಡುತ್ತೇವೆ ಎಂದು ಹೇಳಲು ಶುರು ಮಾಡಿದ್ದಾರೆ. ಮಾನ್ಯ ಸಚಿವರು ಬಂದು ವರದಿ ಮಂಡನೆ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆವು. ಆದರೆ, ಕಾನೂನು ಸಚಿವರಾಗಿ, ಸಂಸದೀಯ ಸಚಿವರಾಗಿ ಮರುಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಮೂರ್ಮೂರು ಬಾರಿ ರೂಲಿಂಗ್ ಕೊಟ್ಟ ಮೇಲೂ ಈ ರೀತಿ ಹೇಳುತ್ತಿದ್ದಾರೆ. ಕಾನೂನು ಸಚಿವರು ಸರಿಯಾದ ದಿಕ್ಕಿನಲ್ಲಿ ಹೋಗುತ್ತಿದ್ದಾರೋ ಇಲ್ಲವೋ ಎಂದು ಇಡೀ ರಾಜ್ಯದ ಜನ ನೋಡುತ್ತಿದ್ದಾರೆ. . .

**ಡಾ:ಮತ್ತಿಕಟ್ಟಿ ವೀರಣ್ಣ:–** ನಿಮ್ಮನ್ನೂ ನೋಡುತ್ತಿರುತ್ತಾರೆ . . . (ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–**ದಯವಿಟ್ಟು ವರದಿ ಮಂಡನೆ ಮಾಡಿ. ಇಲ್ಲದಿದ್ದರೆ, ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ರಾಜೀನಾಮೆ ಕೊಟ್ಟು ಹೋಗುವುದು ಸೂಕ್ತ.

**(ಗೊಂದಲ)**

**ಡಾ:ಮತ್ತಿಕಟ್ಟಿ ವೀರಣ್ಣ:–**ಮಾನ್ಯ ಸಭಾಪತಿಗಳೆ, ಸದನದಲ್ಲಿ ಮೊದಲು ಪ್ರಶ್ನೋತ್ತರ ನಡೆಯಲಿ. ಪ್ರಶ್ನೋತ್ತರ ಮುಗಿದ ನಂತರ ಬೇಕಾದರೆ ಈ ಕುರಿತು ಚರ್ಚೆ ಮಾಡೋಣ. . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಪ್ರಶ್ನೋತ್ತರ ನಡೆಯಲಿ. ಆದರೆ ರೂ. 15 ಲಕ್ಷ ಕೋಟಿ ಲೂಟಿ ಆಗಿರುವುದು ಪರವಾಗಿಲ್ಲವೇ? . . .(ಗೊಂದಲ) . . .(ಗೊಂದಲ) ನಡೆದಿರುವುದನ್ನು ಮುಚ್ಚಿ ಹಾಕುವುದಕ್ಕೆ ನೀವು ಒಂದು ತೀರ್ಮಾನ ಮಾಡಿದ್ದೀರಿ . . .(ಗೊಂದಲ) ಬರಗಾಲ, ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಟಿವಿಗಳಲ್ಲಿ ಧಾರಾವಾಹಿಯಾಗಿ ಬರುತ್ತಿದೆ ಅದಕ್ಕೆ ಉತ್ತರ ಕೊಡುವುದಕ್ಕೆ ಆಗದೇ ವರದಿಯನ್ನು ಮುಂದಿಟ್ಟುಕೊಂಡು ನಾಟಕ ಆಡುತ್ತಿದ್ದಾರೆ . . . (ಗೊಂದಲ) . .

**ಡಾ:ಮತ್ತಿಕಟ್ಟಿ ವೀರಣ್ಣ:–** ಲೂಟಿ ಮಾಡಿ ಜೈಲಿಗೆ ಹೋದವರು ಇವರು . . .(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:–**ಎಲ್ಲಾ ಪ್ರಕ್ರಿಯೆಗಳು ಕಾನೂನಿನ ಪ್ರಕಾರ ನಡೆದಿದೆ. ಕಾನೂನು ಹೊರತಾಗಿ ನಾನು ಏನನ್ನೂ ಮಾಡುವುದಿಲ್ಲ. ಅಸಂಬದ್ಧವಾಗಿ, ನಿಯಮಕ್ಕೆ ವಿರುದ್ಧವಾಗಿ, ಪದೇ ಪದೇ ನೂರ ಸಲ ಹೇಳಿ ಸುಳ್ಳನ್ನು ಸತ್ಯವನ್ನಾಗಿ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ಕೋರ್ಟ್ ಹೇಳಿದ ಹಾಗೆ ಕೇಳದೇ ಇರುವುದು ನಿಯಮವೇ? ಸಭಾಪತಿಯವರ ರೂಲಿಂಗನ್ನು ಮೀರುವುದು ಕಾನೂನೇ? ಬಿಎಸಿಯಲ್ಲಿ ತೀರ್ಮಾನವಾಗಿದ್ದನ್ನು ಮುಚ್ಚಿ ಹಾಕುತ್ತಿರುವುದು ಕಾನೂನೇ? . . .(ಗೊಂದಲ)

**ಶ್ರೀ ಟಿ.ಬಿ.ಜಯಚಂದ್ರ:–** ರೂ. 15 ಲಕ್ಷ ಕೋಟಿ, ರೂ. 25 ಲಕ್ಷ ಕೋಟಿ ರೂಪಾಯಿಗಳು ಎಂದು ಹೇಳಿ ಹೇಳಿ ಕೇವಲ ಸುಳ್ಳಿನ ಕಂತೆಯಿಂದ ರಾಜಕಾರಣ ಮಾಡುತಿದ್ದಾರೆ, ಜನರ ಮನಸ್ಸನ್ನು ಕೆಡಿಸುವಂತಹ ಕೆಲಸ ಮಾಡುತ್ತಿದ್ದಾರೆ. ರಾಜಕಾರಣ ಮಾಡಬೇಕು ಎಂದರೆ ಸದನದಿಂದ ಹೊರಗೆ ಹೋಗೋಣ. ಸದನದ ಒಳಗೆ ರಾಜಕಾರಣಕ್ಕೆ ಅವಕಾಶ ಆಗಬಾರದು. ಎಲ್ಲಾ ವಿಚಾರಗಳೂ ಕೂಡ ಸಂವಿಧಾನಬದ್ಧವಾಗಿ ಚರ್ಚೆ ಆಗಬೇಕು, ಚರ್ಚೆಯ ಹಿನ್ನೆಲೆಯಲ್ಲಿ ಸದನ ನಡೆಯಬೇಕು. ಮಾನ್ಯ ಸಭಾಪತಿಗಳೆ, ತಾವು ಸುಮಾರು 5–6 ವರ್ಷದಿಂದ ವಿಧಾನಪರಿಷತ್ತಿನ ಸಭಾಪತಿಯಾಗಿ ಕೆಲಸ ಮಾಡುತ್ತಿದ್ದೀರಿ. ನಿಮಗೇನಾದರೂ ಃ.ಕ. (ಃಟಂಂಜ ಕಡಿಜಿಹಡಿಜ) ಬಂತೇ? ಇವರನ್ನು ಹ್ಯಾಂಡಲ್ ಮಾಡಬೇಕಾದರೆ ತುಂಬಾ ಕಷ್ಟ ಇರುತ್ತದೆ ಎಂದು ನಾನು ಭಾವಿಸುತ್ತೇನೆ. ನಿಯಮ ಇರಲಿ, ನಿಯಮ ಬಿಟ್ಟು ಹೀಗೆ ಮಾಡುವುದು ಎಷ್ಟು ಸರಿ? . . .

**ಶ್ರೀ ಕೆ.ಎಸ್.ಈಶ್ವರಪ್ಪ:–**ತಾವು ಕಾನೂನನ್ನು ಮೀರುತ್ತಿದ್ದೀರಿ, ಸಭಾಪತಿಯವರ ರೂಲಿಂಗನ್ನು ಮೀರುತ್ತಿದ್ದೀರಿ. ಈ ರೀತಿ ಮೀರುವುದೇ ನಿಮಗೆ ಕಾನೂನೇ? . . .(ಗೊಂದಲ)

**Sri T.B. JAYACHANDRA:** It is a matter between the Government and the Chair.

**ಸಭಾಪತಿಗಳು:–** ಬಾವಿಯಲ್ಲಿರುವ ಮಾನ್ಯ ತಮ್ಮ ಸ್ಥಾನಗಳಿಗೆ ತೆರಳಿದರೆ ನನಗೂ ಸ್ವಲ್ಪ ವಿಷಯಗಳನ್ನು ಹೇಳಲು ಅನುಕೂಲವಾಗುತ್ತದೆ. ಈ ರೀತಿ ಬಾವಿಯಲ್ಲಿದ್ದರೆ ಆಗುವುದಿಲ್ಲ . . .(ಗೊಂದಲ)

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಗಳೆ, ಉಚ್ಚನ್ಯಾಯಾಲಯ ಕೂಡ ಆ ವರದಿಯನ್ನು ಸದನದಲ್ಲಿ ಮಂಡಿಸಬೇಕು ಎಂದು ಹೇಳಿದೆ. ತಾವೂ ಕೂಡ ಹೇಳಿದ್ದೀರಿ. ಉಚ್ಚನ್ಯಾಯಾಲಯ ಮತ್ತು ತಾವು ಹೇಳಿದ್ದರೂ ಮಂಡನೆ ಮಾಡದೇ ಇದ್ದರೆ ಹೇಗೇ? ಸರ್ಕಾರ ಆ ವರದಿಯನ್ನು ಮಂಡನೆ ಮಾಡಲಿ, ನಂತರ ಅದರ ಬಗ್ಗೆ ಚರ್ಚೆ ಮಾಡೋಣ. ನಂತರ ಅದನ್ನು ಬೇಕಾದರೆ ಸಂಪೂರ್ಣ ತಿರಸ್ಕೃತ ಮಾಡಲಿ. ನಮ್ಮ ತಕರಾರಿಲ್ಲ. ಮೊದಲು ವರದಿಯನ್ನು ಮಂಡನೆ ಮಾಡಲಿ. . . .

**ಡಾ:ಮತ್ತಿಕಟ್ಟಿ ವೀರಣ್ಣ:–** ಮೊದಲು ಪ್ರಶ್ನೋತ್ತರ ಮುಗಿಯಲಿ, ನಂತರ ಚರ್ಚೆ ಮಾಡೋಣ. . .

(ಗೊಂದಲ)

**ಶ್ರೀ ರಾಮಚಂದ್ರಗೌಡ:–** ವರದಿ ಮಂಡನೆ ಮಾಡಿದ ಮೇಲೆ ಅವರು ಏನು ಬೇಕಾದರೆ ಕ್ರಮ ಕೈಗೊಳ್ಳಲಿ. ನಂತರ ಬೇಕಾದರೆ ಸಂಪೂರ್ಣ ತಿರಸ್ಕೃತ ಮಾಡಲಿ . . . (ಗೊಂದಲ)

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಗಳೆ, ಆವತ್ತಿನಿಂದ ತಾವು ವಾದ–ವಿವಾದಗಳನ್ನು ಕೇಳಿ, ಆ ವರದಿಯನ್ನು ಸದನದಲ್ಲಿ ಮಂಡಿಸಿ ಎಂದು ಒಂದು ತೀರ್ಮಾನ ಕೊಟ್ಟಿದ್ದೀರಿ. ಆದರೆ ಸರ್ಕಾರ ಅದನ್ನು ಪುನರ್ವಿಮರ್ಶೆ ಮಾಡಬೇಕು ಎಂದು ಹೇಳುತ್ತಿದೆ. ನೀವು ಪುನರ್‌ವಿಮರ್ಶೆ ಮಾಡುತ್ತೀರಾ? ಇಲ್ಲ

ಎಂದು ಹೇಳುವುದಾದರೆ, ನಾನು ಪುನರ್ವಿಮರ್ಶೆ ಮಾಡುವುದಿಲ್ಲ, ಆ ವರದಿಯನ್ನು ಸದನದಲ್ಲಿ ಮಂಡಿಸಿ ಎಂದು ಹೇಳಿ. ತಾವು ಈಗಾಗಲೇ ಆದೇಶವನ್ನು ಕೊಟ್ಟಿದ್ದೀರಿ. ಈಗ ಉಳಿದಿರುವುದು ಒಂದೇ ದಾರಿ. ಈ ಸದನದಲ್ಲಿ ತಮ್ಮ ಆದೇಶವನ್ನು ಪಾಲನೆ ಮಾಡುತ್ತಾರೋ ಇಲ್ಲವೋ ಹೇಳಲಿ. ನನಗೆ ಗೊತ್ತಿರುವ ಪ್ರಕಾರ, ನಾನು ಈಗಾಗಲೇ ಹೇಳಿದ ಹಾಗೆ ಕ್ಯಾಬಿನೆಟ್‌ನಲ್ಲಿ ಈ ವರದಿಯನ್ನು ತಿರಸ್ಕರಿಸಿದ್ದಾರೆ. ತಿರಸ್ಕರಿಸಿದ್ದನ್ನು ಸದನದಲ್ಲಿ ಮಂಡಿಸಲು ಸರ್ಕಾರಕ್ಕಿರುವ ತೊಂದರೆ ಏನು? ಯಾರನ್ನಾದರೂ ರಕ್ಷಣೆ ಮಾಡಬೇಕೇ? ಹಾಗಿಲ್ಲದಿದ್ದರೆ ವರದಿಯನ್ನು ಮಂಡನೆ ಮಾಡಿ. ಇದನ್ನು ನೀವು ಕೋರ್ಟ್‌ನಲ್ಲೂ ಹೇಳಿದ್ದೀರಿ. ಆ ವರದಿಯನ್ನು ಮಂಡನೆ ಮಾಡಿಬಿಟ್ಟರೆ ಯಾವುದೇ ಚರ್ಚೆಗೆ ಅವಕಾಶ ಇರುವುದಿಲ್ಲ. ಇಲ್ಲದಿದ್ದರೆ, ಮಂಡನೆ ಮಾಡುವುದಿಲ್ಲ ಎಂದು ಹೇಳಿಬಿಡಿ.

(ಈ ಹಂತದಲ್ಲಿ ಮಾನ್ಯ ಕೆ.ಬಿ.ಶಾಣಪ್ಪನವರು ತಮ್ಮ ಸ್ಥಾನಕ್ಕೆ ತೆರಳಿದರು)

**ಸಭಾಪತಿಯವರು:–** ಮಾನ್ಯ ಬಸನಗೌಡ ಯತ್ನಾಳ್‌ರವರು ಸದನ ನಡೆಸುವುದಕ್ಕೆ ತಮ್ಮ ಅನುಭವವನ್ನು ಹೇಳುತ್ತೇನೆಂದು ಹೇಳುತ್ತಿದ್ದಾರೆ. ಸದನ ನಡೆಸುವುದಕ್ಕೆ ಸಲಹೆ ಕೊಡಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಇವರು ಮತ್ತೆ ಅದು ಇದು ಹೇಳುವುದರ ಬದಲು ನಾವು ಸದನದಲ್ಲಿ ಮಂಡನೆ ಮಾಡುವುದಿಲ್ಲ ಎಂದು ಹೇಳಿಬಿಡಲಿ. ಉಳಿದಿರುವುದು ವಿರೋಧ ಪಕ್ಷಕ್ಕೆ ಸೇರಿದ್ದು. ಅವರು ಏನಾದರೂ ತೀರ್ಮಾನ ತೆಗೆದುಕೊಳ್ಳಲಿ.

**ಶ್ರೀ ಬಸನಗೌಡ ಆರ್.ಪಾಟೀಲ್ ಯತ್ನಾಳ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ರೂಲಿಂಗ್‌ನ್ನು ಕೊಟ್ಟಿದ್ದೀರಿ. ಅದನ್ನು ರಾಜ್ಯ ಸರ್ಕಾರ ಒಪ್ಪಿಕೊಂಡಿದೆ. ಇದು ಕರ್ನಾಟಕದಲ್ಲೇ ಅತೀ ದೊಡ್ಡ ಹಗರಣ ಆಗಿದೆ. ಸುಮಾರು ಹದಿನಾರು–ಹದಿನೇಳು ಸಾವಿರ ಕೋಟಿ ರೂಪಾಯಿಯನ್ನು ಯಾರ್‍ಯಾರು ಮಹಾತ್ಮರು ಅಹಿಂದ ಹೆಸರಿನಲ್ಲಿ ಲೂಟಿ ಮಾಡಿದ್ದಾರೆ ಎನ್ನುವ ಬಣ್ಣ ಹೊರಗೆ ಬರುವುದಿದೆ. ದಯವಿಟ್ಟು ಸರ್ಕಾರ ಮೊಂಡುತನ ತೋರಿಸದೆ ತಮ್ಮ ಆದೇಶದ ಪ್ರಕಾರ ಇವತ್ತು ಅವರು ಸದನಕ್ಕೆ ಆ ವರದಿಯನ್ನು ಕೊಡುವುದು ಒಳ್ಳೆಯದು. ಇದೇ ರೀತಿಯಾದರೆ ಪ್ರಶ್ನೋತ್ತರ ವೇಳೆ, ಗಮನ ಸೆಳೆಯುವ ಸೂಚನೆ, ಬರಗಾಲದ ಬಗ್ಗೆ ಮತ್ತು ನಮ್ಮ ರಾಜ್ಯದ ಅನೇಕ ಜಲ್ವಂತ ಸಮಸ್ಯೆಗಳ ಬಗ್ಗೆ ಮಾತನಾಡಬೇಕಾಗಿದೆ. ಅದಕ್ಕೆ ಅವಕಾಶವೇ ಸಿಗುತ್ತಿಲ್ಲ. ನಿರಂತರವಾಗಿ ಸದನ ಇದೇ ರೀತಿ ನಡೆದುಕೊಂಡು ಹೋದರೆ ನಾವು ನಮ್ಮ ಜನರಿಗೆ ಏನು ಉತ್ತರ ಹೇಳಬೇಕು? ದಯವಿಟ್ಟು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಸರ್ಕಾರ ತಕ್ಷಣ ಆ ವರದಿಯನ್ನು ಸದನಕ್ಕೆ ಕೊಟ್ಟು ಅಂತ್ಯ ಹಾಡಬೇಕು. ಗುರುವಾರದವರೆಗೆ ನಮ್ಮ ಸದನ ನಡೆಯುವುದಕ್ಕೆ ಅವಕಾಶ ಕೊಡಬೇಕು. ಇದೇ ರೀತಿ ಮೊಂಡುತನ ಮುಂದುವರೆದರೆ ಈ ಧರಣಿಯಲ್ಲಿ ನಾನೂ ಸಹ ಪಾಲ್ಗೊಳ್ಳುತ್ತಿದ್ದೇನೆ. ಸರ್ಕಾರ ಆದಷ್ಟು ಇದನ್ನು ಗಂಭೀರವಾಗಿ ತೆಗೆದುಕೊಂಡು ತನ್ನ ನಿಲುವನ್ನು ಬದಲಾವಣೆ ಮಾಡಿಕೊಳ್ಳಬೇಕೆಂದು ನಾನು ಆಗ್ರಹ ಮಾಡುತ್ತೇನೆ.

**ಶ್ರೀ ಕೆ.ಬಿ.ಶಾಣಪ್ಪ(ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ಯಾವ ರೀತಿ ಸರ್ಕಾರಕ್ಕೆ ಸದನ ನಡೆಯಬೇಕೆನ್ನುವ ಉದ್ದೇಶ ಇದೆಯೋ ನಮಗೂ ಅಷ್ಟೇ ಜವಾಬ್ದಾರಿ ಇದೆ. ಆದರೆ ಈ ದೇಶದಲ್ಲಿ ನಡೆದಿರುವುದೇನೆಂದರೆ ನ್ಯಾಯಾಲಯ ಏನು ಹೇಳುತ್ತದೆ ಅದನ್ನು ಕೇಳಬೇಕು. Rule of law is the final stage of the country. They have directed to the State Government to lay the report in the House. And it has been committed by the government representative in the court, “Sir, we will put it before this House in the month of February”. ನಾವೇನು ಕೇಳುತ್ತಿಲ್ಲ. ನೀವು ಒಪ್ಪಿರುವುದನ್ನು ಇಡುತ್ತಾರೆಯೋ ಇಲ್ಲವೋ? ನಾವು ಇಡುವುದಿಲ್ಲ ಎಂದು ಸರ್ಕಾರ ಹೇಳಿಬಿಡಲಿ. ನಾವೇನು ಮಾಡಬೇಕೋ ಅದನ್ನು ಮಾಡುತ್ತೇವೆ. ತಾವು ರೂಲಿಂಗ್ ಕೊಟ್ಟಿರುವುದನ್ನು ಒಪ್ಪುತ್ತಾರೆಯೋ ಇಲ್ಲವೋ ಎಂಬುದನ್ನು ಹೇಳಲಿ. ಇಲ್ಲ, ನಾವು ಅವರು ಹೇಳಿರುವುದನ್ನು ಒಪ್ಪುವುದಿಲ್ಲ, ನ್ಯಾಯಾಲಯ ಹೇಳಿರುವುದನ್ನು ಒಪ್ಪುವುದಿಲ್ಲ. ನಮ್ಮ ಮನಸ್ಸಿಗೆ ಬಂದ ಹಾಗೆ ನಾವು ಮಾಡುತ್ತೇವೆಂದು ಅದನ್ನಾದರೂ ಹೇಳಲಿ. ನಾವು ಮುಂದೆ ಏನು ಮಾಡಬೇಕು ಅದನ್ನು ಮಾಡುತ್ತೇವೆ. ಇಷ್ಟೇ ನನ್ನ ಸಬ್‌ಮಿಷನ್.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕಳೆದ ಮೂರು ದಿವಸಗಳಿಂದ ನಾನು ನೋಡುತ್ತಿದ್ದೇನೆ. ಯಾರಿಗೂ ಕೂಡ ಸದನ ನಡೆಸಬೇಕು, ನಿಮ್ಮ ಆದೇಶಕ್ಕೆ ನಿಮ್ಮ ಪೀಠಕ್ಕೆ ಬೆಲೆ ಕೊಡುವಂತಹ ಕೆಲಸ ಇಲ್ಲಿ ನಡೆಯಬೇಕೆಂಬ ಕಳಕಳಿಯಿಂದ ನಾವು ಇಲ್ಲಿಗೆ ಬರುತ್ತೇವೆ. ಇದು ನಿಜವಾಗಿಯೂ ನಮ್ಮ ರಾಜ್ಯದ ದುರಂತ. ಜನಪ್ರತಿನಿಧಿಗಳಾಗಿ ನಾವು ಹೊರಗಡೆ ಜನರ ಮುಂದೆ ನಿಲ್ಲುವುದಕ್ಕೆ ಬಹಳ ಕಷ್ಟವಾಗುತ್ತಿದೆ. ಅನೇಕ ಜಲ್ವಂತ ಸಮಸ್ಯೆಗಳಿದ್ದರೂ ಕೂಡ ಇಲ್ಲಿ ಬಂದಾಗ ನಾವೇನೋ ತಯಾರಿ ಮಾಡಿಕೊಂಡು ಚರ್ಚೆ ಮಾಡಬೇಕೆಂದು ಬರುತ್ತೇವೆ. ಬಂದಾಗ ಅದು ಬೇರೆ ರೀತಿಯ twist ಆಗುತ್ತಿದೆ. ಇವತ್ತೇನು ಸರ್ಕಾರ ಮಂಡನೆ ಮಾಡುತ್ತೇವೆಂದು ನ್ಯಾಯಾಲಯದಲ್ಲಿ ಅಫಿಡವಿಟ್ ಹಾಕಿದೆ. ಮಾನ್ಯ ಮುಖ್ಯಮಂತ್ರಿಗಳು ಭಾಷೆ ಕೊಟ್ಟಿದ್ದಾರೆ, ಸಭಾನಾಯಕರು ಭಾಷೆ ಕೊಟ್ಟಿದ್ದಾರೆ ಮತ್ತು ತಾವು ಕೂಡ ರೂಲಿಂಗ್ ಕೊಟ್ಟಿದ್ದೀರಿ. ಏತಕೋಸ್ಕರ ಈ ರೀತಿ ತಾರತಮ್ಯ ವಹಿಸುತ್ತಿದೆ ಎಂದು ನನಗೆ ಗೊತ್ತಾಗುತ್ತಿಲ್ಲ. ಸರ್ಕಾರ 'yes' ಎಂದು ಹೇಳಬೇಕು ಇಲ್ಲದಿದ್ದರೆ 'no' ಎಂದು ಹೇಳಬೇಕು. ಖಡಾಖಂಡಿತವಾಗಿ ಸರ್ಕಾರ ವರದಿಯನ್ನು ಮಂಡಿಸಲೇಬೇಕು. ಇಲ್ಲವೆಂದರೆ ನಾವು ಕೂಡ ಬಾವಿಗೆ ಇಳಿಯಬೇಕಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ.

**ಸಭಾಪತಿಯವರು:–** ರಘು ಆಚಾರ್‌ರವರೇ, ಸದನ ನಡೆಸುವುದಕ್ಕೆ ವಿನಂತಿ ಮಾಡಿಕೊಳ್ಳಿ. ವಾದ ವಿವಾದ ಬೇಡ. ನಿಮ್ಮಲ್ಲಿರುವ good offices ಅನ್ನು ಉಪಯೋಗ ಮಾಡಿ.

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಆ ಕಡೆಯವರು ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ನಮ್ಮ ಕಡೆಯವರಿಗೂ ಅಭಿಪ್ರಾಯ ಹೇಳುವುದಕ್ಕೆ ಅವಕಾಶ ಕೊಡಿ.

**ಶ್ರೀ ಜಿ.ರಘು ಆಚಾರ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದ ನಾಯಕರನ್ನು ವಿನಂತಿ ಮಾಡುತ್ತಿದ್ದೇನೆ. ಏಕೆಂದರೆ ಜನರು ನಮ್ಮನ್ನು ನೋಡುತ್ತಿದ್ದಾರೆ. ಆಡಳಿತ ಪಕ್ಷದವರಾಗಬಹುದು, ವಿರೋಧ ಪಕ್ಷದವರಾಗಬಹುದು, ಒಂದು ಹಗರಣ ಆಗಿಬಿಟ್ಟಿದೆ. ಹಗರಣ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ನೋಡೋಣ, ಅದು ಚರ್ಚೆಯಾಗಬಹುದು.

**(ಗೊಂದಲ)**

**ಶ್ರೀ ಜಿ.ರಘು ಆಚಾರ್:–** ನಾನು ನಿಮ್ಮ ತರಹ ಮಾತನಾಡುವುದಕ್ಕೆ ತಯಾರಿಲ್ಲ. ಆಗಿದೆಯೋ ಇಲ್ಲವೋ ಅದು ಬೇರೆ ವಿಷಯ. ಮಾತನಾಡುವುದನ್ನು ಕೇಳುವಷ್ಟು ಸೌಜನ್ಯ ಇಲ್ಲವೆಂದರೆ ಹೇಗೆ?

**ಸಭಾಪತಿಯವರು:–** ರಘು ಆಚಾರ್‌ರವರೇ, ನನ್ನ ಕಡೆ ನೋಡಿಕೊಂಡು ಮಾತನಾಡಿ. Address it to the Chair.

**ಶ್ರೀ ಕೆ.ಎಸ್.ಈಶ್ವರಪ್ಪ:–** ಹಗರಣ ಆಗಿದೆ ಎನ್ನುವುದು ಎಲ್ಲಾ ಕಾಂಗ್ರೆಸ್ಸಿಗರ ಅಭಿಪ್ರಾಯ. ಅದನ್ನು ರಘು ಆಚಾರ್‌ರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಉಳಿದವರು ಹೇಳುವುದಕ್ಕೆ ತಯಾರಿಲ್ಲ. ಹಗರಣ ಆಗಿದೆ, ಅದನ್ನು ಸರ್ಕಾರ ಮುಚ್ಚಿಡುವಂತಹ ಪ್ರಯತ್ನ ನಡೆಸುತ್ತಿದೆ.

**ಶ್ರೀ ಜಿ.ರಘು ಆಚಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ವಿನಂತಿ ಮಾಡುತ್ತೇನೆ. ನಾನು ಒಬ್ಬ ಕಡಿಮೆ ವಯಸ್ಸಿನಲ್ಲಿ ಈ ಸದನಕ್ಕೆ ಬಂದಂತಹ ಹುಡುಗ. ನಾನು ಮಾತನಾಡುತ್ತಿರುವಾಗ ಕೇಳುವಷ್ಟು ಸೌಜನ್ಯ ಇಲ್ಲವೆಂದರೆ ಚೆನ್ನಾಗಿ ಕಾಣುವುದಿಲ್ಲ. ಏಕೆಂದರೆ ಸದನವನ್ನು ಎಲ್ಲರೂ ನೋಡುತ್ತಿದ್ದಾರೆ. ನಮ್ಮ ಮೇಲೂ ಜವಾಬ್ದಾರಿ ಇರುತ್ತದೆ. ನಮ್ಮನ್ನು ಜನ ನೋಡುತ್ತಿದ್ದಾರೆ. ಒಂದು ಸಮಸ್ಯೆ ಬಂದಿದೆ.

**ಸಭಾಪತಿಯವರು:–** ಈಗ ಅದರ ಬಗ್ಗೆ ಬೇಡ. Don't underestimate yourself. ನೀವು ಮಾತನಾಡಿ.

**ಶ್ರೀ ಜಿ.ರಘು ಆಚಾರ್:–** ಮಾನ್ಯ ಸಭಾಪತಿಯವರೇ, ಉದಾಹರಣೆಗೆ, ನನ್ನ ಕ್ಷೇತ್ರದಲ್ಲಿ ಹನ್ನೆರಡು ವರ್ಷವಾದ ಮೇಲೆ ಒಂದು ಮಗು ಆಗಿದೆ. ಆ ಮಗು ತೀರಿ ಹೋಗಿದೆ. ಮೊನ್ನೆ ಚಿತ್ರದುರ್ಗ ಆಸ್ಪತ್ರೆಯಲ್ಲಿ ಕೇವಲ 450 ರೂಪಾಯಿ ಯಾರಿಗೋ ಲಂಚ ಕೊಟ್ಟಿಲ್ಲವೆಂದು. ಆ ರೀತಿಯ ಜಲ್ವಂತ ಸಮಸ್ಯೆಗಳು

ನಮಗೆ ಇವೆ. ನನ್ನ ಕ್ಷೇತ್ರಕ್ಕೆ ಹೋದರೆ ಜನ ಬಯ್ಯುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತ್ತೆ ಎರಡು ವರ್ಷಕ್ಕೆ ಚುನಾವಣೆ ಬರುತ್ತದೆ. ಅವರು ತಪ್ಪು ಮಾಡಿದ್ದಕ್ಕೆ ಜನ ನಮಗೆ ವೋಟು ಕೊಟ್ಟಿದ್ದಾರೆ. ತಮ್ಮ ಮೂಲಕ ಮಾನ್ಯ ವಿರೋಧ ಪಕ್ಷದವರಿಗೆ ವಿನಂತಿ ಮಾಡುವುದೇನೆಂದರೆ, ಪ್ರಶ್ನೋತ್ತರ ಮೊದಲು ತೆಗೆದುಕೊಳ್ಳಿ. ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳೋಣ. ಅದಾದ ಮೇಲೆ ಇದನ್ನು ತೆಗೆದುಕೊಳ್ಳಲಿ. ಅದು ಬಿಟ್ಟು ರಾಜಕೀಯ ಲಾಭಕೋಸ್ಕರ ಬಾವಿಗೆ ಬರುವುದು, ಏನು ನಡೆಯದಿರುವುದು ಮಾಡಿದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅವರು ವಿರೋಧ ಮಾಡುತ್ತಿದ್ದಾರೆ. ಜನರು ಅವರನ್ನು ಕ್ಷಮಿಸುವುದಿಲ್ಲ. ಅವರು ಯಾರು ಮತ್ತೆ ಗೆದ್ದು ಸದನಕ್ಕೆ ಬರುವುದಿಲ್ಲ. ಇದು ಸತ್ಯ. ಏಕೆಂದರೆ ಎಲ್ಲರಿಗೂ ಜವಾಬ್ದಾರಿ ಇರಬೇಕಾಗುತ್ತದೆ.

**ಸಭಾಪತಿಯವರು:–** ಈಗ ಉಗ್ರಪ್ಪನವರು ಮಾತನಾಡುತ್ತೇನೆಂದು ಹೇಳುತ್ತಿದ್ದಾರೆ. ಉಗ್ರಪ್ಪನವರೇ, ಅವರವರ ಸ್ಥಾನಗಳಿಗೆ ಹೋಗಿ ಎಂದು ತಾವು ಮನವಿ ಮಾಡಿಕೊಳ್ಳಿ. ಸದನ ನಡೆಯುವುದಕ್ಕೆ ತಮ್ಮ ಅನುಭವದ ಮಾತುಗಳ ಮೂಲಕ ಅವರನ್ನೆಲ್ಲಾ ಅವರ ಸ್ಥಾನಗಳಿಗೆ ವಾಪಸ್ ಕಳುಹಿಸುವುದಕ್ಕೆ ಪ್ರಯತ್ನ ಮಾಡಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರು ಈ ಸದನಕ್ಕೆ ಹಳೆಯ ಸದಸ್ಯರು. ಅವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ ಮತ್ತು ಸಾಕಷ್ಟು ಅನುಭವವಿರುವವರು. ಸದನದಲ್ಲಿ ಈ ರೀತಿಯ ಕಗ್ಗಂಟಾದಾಗ ಆ ಕಗ್ಗಂಟನ್ನು ಬಿಡಿಸಿ ಸದನ ನಡೆಸುವುದಕ್ಕೆ ಅವರಿಗೆ ಸಾಕಷ್ಟು ಶಕ್ತಿ ಇದೆ. ಅವರ ಬುದ್ಧಿಯನ್ನು ಉಪಯೋಗಿಸಿ ಹೇಳುತ್ತಾರೆ, ಕೇಳೋಣ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ಸದನ ಅನೇಕ ಜಲ್ವಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿರುವಂಥದ್ದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ. ಯಾವುದೇ ಸಮಸ್ಯೆಯನ್ನು ಬಿಡಿಸಬೇಕಾದರೆ ನಾವುಗಳೇ ಈ ರಾಜ್ಯದಲ್ಲಿ ಕಾನೂನುಗಳನ್ನು, ನಿಯಮಾವಳಿಗಳನ್ನು ಮಾಡತಕ್ಕಂಥದ್ದು ಸದನ. ನಾವೇ ನಿಯಮಾವಳಿಗಳನ್ನು ಮಾಡತಕ್ಕಂಥವರು ನಿಯಮಾವಳಿಗಳನ್ನು ಪಾಲನೆ ಮಾಡದಿದ್ದರೆ ಎಲ್ಲೋ ರಾಜ್ಯಕ್ಕೆ ಒಂದು ದೊಡ್ಡ ಕೆಟ್ಟ ಸಂದೇಶ ಹೋಗುವುದಕ್ಕೆ ಸಾಧ್ಯತೆ ಇದೆ. ಇವತ್ತು ಏನಾಗಿದೆ ಎಂದರೆ, rightly or wrongly ಒಂದು issue ಅನ್ನು ಈಗ raise ಮಾಡಿದ್ದಾರೆ. ಆ issue raise ಆಗಿರುವಂಥದ್ದರಲ್ಲಿ ಏನೆಲ್ಲಾ ಲೋಪಗಳಿವೆ ಅಥವಾ merits and demerits ಇವೆ, ಇದನ್ನು ಚರ್ಚೆ ಮಾಡುವಂಥದ್ದಕ್ಕೆ ನಮಗಿರತಕ್ಕಂಥ ನಿಯಮಾವಳಿಗಳಲ್ಲಿ ನಾವಾಗಲಿ, ಅವರಾಗಲಿ, ಆ ನಿಯಮಾವಳಿಗಳ ಅಡಿಯಲ್ಲಿ ತರಬೇಕಾಗುತ್ತದೆಯೇ ಹೊರತು ಏಕಾಏಕಿ ಯಾವುದೇ ನಿಯಮಗಳನ್ನು ನಾವು invoke ಮಾಡದೆ ಈ ರೀತಿ ಒಂದು ಇಶ್ಯೂವನ್ನು, ಅವರು ಹೇಳುತ್ತಿದ್ದಾರೆ ತಾವು ನಿರ್ದೇಶನವನ್ನು ಕೊಟ್ಟಿದ್ದೀರಿ, ಆ ನಿರ್ದೇಶನವನ್ನು ಪಾಲನೆ ಮಾಡಲಿಲ್ಲ ಎನ್ನುವುದು ಅವರ ವಾದ. ಪಾಲನೆ ಮಾಡದೆ ಇರುವಂಥದ್ದಕ್ಕೆ ಏನು ಮಾಡಬೇಕೆಂದು ನಿಯಮಾವಳಿಗಳಲ್ಲಿ ಇದೆ. ಒಂದು ವೇಳೆ ಏಕೆ ಪಾಲನೆ ಮಾಡಲಿಲ್ಲ ಎನ್ನುವುದರ ಬಗ್ಗೆ ರಾಜ್ಯ ಸರ್ಕಾರಕ್ಕೆ ವಿವರಣೆ ಕೊಡುವುದಕ್ಕೂ ನಿಯಮಾವಳಿಗಳಲ್ಲಿ ಇದೆ. ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಯಾವ ವರದಿಯನ್ನು ಮಂಡನೆ ಮಾಡಬೇಕೆಂದು ನಮ್ಮ ಮುಂದೆ ಕಾಣುತ್ತಿದೆ. ಅದನ್ನು ನಾನು ನೋಡುತ್ತಿದ್ದೆ. ಯಾರ್‍ಯಾರಾದೋ ಹೆಸರುಗಳನ್ನು unnecessary… ಯಾರಿಗೂ ನೋಟಿಸ್ ಕೊಟ್ಟಿಲ್ಲ. Principles of natural justice…

**ಸಭಾಪತಿಯವರು:–** ಅದರ merit ಗೆ ಹೋಗಬೇಡಿ. I want your cooperation to run the House smoothly. ಅದಕ್ಕೆ ದಾರಿ ತೋರಿಸಿ.

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ. ಅದರಲ್ಲಿ ಯಾರ್‍ಯಾರ ಹೆಸರು ಇದೆ, ಏನೇನು ಅವ್ಯವಹಾರ ನಡೆದಿದೆ ಎಂದು ಅವರು ಚರ್ಚೆ ಪ್ರಾರಂಭ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಗೆ ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಗೋ.ಮಧುಸೂದನ್:–** ಮಾನ್ಯ ಸಭಾಪತಿಯವರೇ, ಈಗ ಅದು ಸದನದ ಆಸ್ತಿ.

**ಶ್ರೀ ಕೆ.ಎಸ್.ಈಶ್ವರಪ್ಪ** (ಮುಂದು):– ಯಾರಿಗೆ ಹೇಳಬೇಕು ನಾವು? ಇಲ್ಲಿ ನಿಂತು ಭಾಷಣ ಮಾಡಬೇಕೆ? ನೀವು ಎರಡು ಗಂಟೆಗೆ ಸದನವನ್ನು ಭೋಜನಕ್ಕೆ ಮುಂದೂಡಿ, ಮತ್ತೆ ಮೂರು ಗಂಟೆಗೆ ಬನ್ನಿ ಎಂದು ಹೇಳುತ್ತೀರಿ, ಊಟ ಮಾಡಲು ಆಗುವುದಿಲ್ಲ, ಮಲಗಲು ಆಗುವುದಿಲ್ಲ. ಇಲ್ಲಿ ಬಂದು ಈ ರೀತಿ ಕಂಠ ಶೋಷಣೆ ಮಾಡಿಕೊಳ್ಳುವುದರಿಂದ ಏನು ಲಾಭ? ಇವರು ಏನಾದರೂ ಸ್ವಲ್ಪ ಅರ್ಥ ಮಾಡಿಕೊಳ್ಳುತ್ತಾರೆ ಎನ್ನುವುದಾದ್ದರೆ ನಾವು ಹೇಳಬಹುದು. ಉತ್ತರ ಕರ್ನಾಟಕದ ಗುಲ್ಬರ್ಗಾಕ್ಕೆ ಹೋಗಿ ಅಲ್ಲಿ ವಿಶೇಷ ಸಂಪುಟ ಸಭೆಯನ್ನು ನಡೆಸಿ 50,000 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುವುದು ಎಂದು ಘೋಷಣೆ ಮಾಡಿದ್ದಾರೆ. ಅಲ್ಲಿಯ ಪ್ರಜಾವಾಣಿ ಪತ್ರಿಕೆಯನ್ನು ನಾನು ಓದಿದೆ. ಓದಿ ಖುಷಿಯಾಯಿತು. ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಿಗೆ ಲಾಭ, ಕಲಬುರಗಿ ಸಂಪುಟ ಸಭೆಯಲ್ಲಿ ನಿರ್ಧಾರ. 50,000 ಹುದ್ದೆಗಳ ಭರ್ತಿ, ಪ್ರಜಾವಾಣಿಯ ಮುಖಪುಟದಲ್ಲಿ, banner headline ನಲ್ಲಿ ಈ ಸುದ್ದಿ ಬಂದಿದೆ. ಏನು ಹೇಳುವುದು, ಏನು ಬಿಡುವುದು ಭಾಷಣ ಮಾಡಬೇಕೆ, ಬೇಡವೆ. ಇವರ ಬಜೆಟ್ ಹೀಗೆ, ಇವರ ಚುನಾವಣಾ ಪ್ರಣಾಳಿಕೆ ಹೇಗೋ, ಕಾಂಗ್ರೆಸ್ ಚುನಾವಣೆ ಪ್ರಣಾಳಿಕೆ ನೋಡಿದರೆ ಇವರು ಏನೇನು ಸಾಧನೆ ಮಾಡಿದ್ದಾರೆ... ನಾನು ಕೈಮುಗಿದು ಕೇಳುತ್ತೇನೆ, ನೀವು ರಸ್ತೆ ಕೊಡಬೇಡಿ, ನೀರು ಕೊಡಬೇಡಿ, ಅದೇನು 165 ಯೋಜನೆಗಳ ಗುರಿಯನ್ನು ಇಟ್ಟುಕೊಂಡಿದ್ದೇವು, 124 ಸಾಧನೆ ಮಾಡಿದ್ದೇವೆ ಎಂದು ಹೇಳಿದ್ದಿರಲ್ಲ, ನಿಮ್ಮ ಕಾಲಿಗೆ ಬಿದ್ದು ಕೇಳುತ್ತೇನೆ ಅದರ ಒಂದು ಪಟ್ಟಿ ಕೊಟ್ಟುಬಿಡಿ. ಅದು ಯಾವುದು ಎನ್ನುವುದನ್ನು ಕಣ್ಣಿದಾದ್ದರೂ ನೋಡಿ ಬಿಡುತ್ತೇನೆ. ಪುಸ್ತಕದ ಪ್ರಕಾರವು ಮೋಸ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾನಾಯಕರು ಸುಮ್ಮನೆ ಕುಳಿತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಪಾಪ ಅವರೇನು ಮಾಡುತ್ತಾರೆ. ಅವರು ಹಾಳಾಗಿ ಹೋಗಲಿ ಎನ್ನುವುದೆ ಅವರ ಆಸೆ.

**ಶ್ರೀ ಎಂ.ನಾರಾಯಣಸ್ವಾಮಿ:–**ಸರಿಯಾಗಿ ಮಾತನಾಡಿ. ಹಾಳಾಗಿ ಹೋಗಲಿ ಎಂದರೆ ಏನು ಅರ್ಥ?

**ಶ್ರೀ ಧರ್ಮಸೇನಾ:–** ನೀವು ಹಾಗೆ ತಿಳಿದುಕೊಂಡರೆ ನೀವೆ...

**ಡಾ:ಜಿ.ಪರಮೇಶ್ವರ್(ಸಭಾನಾಯಕರು):–** ನೀವು ಎಷ್ಟು ಸುಳ್ಳು ಹೇಳಬೇಕು ಅಷ್ಟು ಹೇಳಿ. ಅದಕ್ಕೆ ಉತ್ತರವನ್ನು ಆಮೇಲೆ ಕೊಡುತ್ತೇನೆ. ಆಮೇಲೆ ಮಾತನಾಡಬೇಕು ಎಂದೇ ನಾನು ಸುಮ್ಮನೆ ಕುಳಿತ್ತಿದ್ದೆನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಇದರಲ್ಲಿ ಯಾವುದಾದ್ದರೂ ಒಂದು ಅಂಕಿ–ಅಂಶ ಸುಳ್ಳು ಎನ್ನಿಸಿದ್ದರೆ ನೀವು ಹೇಳಿ.

**ಡಾ:ಜಿ.ಪರಮೇಶ್ವರ್:–** ಆಮೇಲೆ ಹೇಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಬಂದರು ನೋಡಿ ನಮ್ಮ ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಆಂಜನಯ್ಯನವರು. ನಾನು ನನ್ನ ಊರಿಗೆ ಹೋಗುವಾಗು ಚಿತ್ರದುರ್ಗದ ಮೇಲೆಯೇ ಹೋಗುತ್ತೇನೆ. ಅಲ್ಲಿ ಒಂದು ಒಳ್ಳೆಯ ಹೋಟೆಲ್ ಇದೆ. ಅಲ್ಲಿ ಕಾಫಿ ಕುಡಿಯುತ್ತೇನೆ. ಅಲ್ಲಿ ಯಾವಾಗಲೂ ಇವರದೊಂದು ಹೇಳಿಕೆ ಇದ್ದೇ ಇರುತ್ತದೆ. ಏನು ಎಂದರೆ, ಅಪ್ಪರ್ ಭದ್ರಾ ಯೋಜನೆ..

**ಶ್ರೀ ಎಂ.ನಾರಾಯಣಸ್ವಾಮಿ:–** ಯಾವ ಹೋಟೆಲ್ ಅದು?

**ಶ್ರೀ ಕೆ.ಎಸ್.ಈಶ್ವರಪ್ಪ:–** ಸಸ್ಯಾಹಾರಿ ಹೋಟೆಲ್. ಮಾಂಸಾಹಾರಿ ಹೋಟೆಲ್‌ಗೆ ಹೋಗಬೇಕು ಎನ್ನಿಸಿದರೆ ಹೋಗುತ್ತೇನೆ. ನನಗೇನು ಮುಲಾಜು. ನನ್ನ ಹಣ ನಮ್ಮ ಹೋಟೆಲ್‌ಗೆ ಹೋಗಲು ಏನು ಮುಲಾಜಿಲ್ಲ. ಮಾನ್ಯ ಸಭಾನಾಯಕರಿಗೆ ಮಾಂಸಾಹಾರಿ ಹೋಟೆಲ್‌ಗೆ ಹೋಗಲು ಏನಾದರೂ ಮುಲಾಜು ಇದೆಯೇ?

**ಡಾ:ಜಿ.ಪರಮೇಶ್ವರ್:–** ಏನು ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಏಕೆಂದರೆ ಅವರು ಚೆನ್ನಾಗಿ ಮಾಂಸಾಹಾರಿ ಊಟ ಮಾಡುತ್ತಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಆರ್‌ಎಸ್‌ಎಸ್ ನವರು ಮಾಂಸಾಹಾರಿ ಊಟ ಮಾಡುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಮೊನ್ನೆ ಉತ್ತರ ಪ್ರದೇಶದ ಮುಸ್ಲಿಂ ಬಂಧುಗಳೆಲ್ಲರೂ ಬಿಜೆಪಿ ಗೆ ಮತವನ್ನು ಕೊಟ್ಟಿದ್ದಾರೆ. ಕರ್ನಾಟದಲ್ಲಿಯು ಹಾಗೆ ಆಗುತ್ತದೆ. ಗೋವಾದಲ್ಲಿ ಕ್ರಿಶ್ಚಿಯನ್

ಬಂಧುಗಳು ಬಿಜೆಪಿಗೆ ಮತವನ್ನು ಕೊಟ್ಟಿದ್ದಾರೆ. ಉತ್ತರ ಪ್ರದೇಶದಲ್ಲಿ ಮುಸ್ಲಿಂ ಬಂಧುಗಳು ಬಿಜೆಪಿಗೆ ಮತವನ್ನು ಕೊಟ್ಟಿದ್ದಾರೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ಮತ ಕೊಟ್ಟಿದ್ದರಿಂದಲೇ ಅಲ್ಲಿ 13 ಸೀಟ್‌ಗಳು ಬಂದಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಬಿಬಿಎಂಪಿ ಯಲ್ಲಿ ಬಹುಮತ ತೆಗೆದುಕೊಂಡಿದ್ದಿರಾ ಆಂಜನೇಯನವರೆ?

**ಶ್ರೀ ಎಚ್.ಆಂಜನೇಯ:–** ಬಹುಮತ ಬಂದಿತ್ತು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಸರಿ ಬಿಡಿ. ಸುಳ್ಳು ಹೇಳುವುದರಲ್ಲಿ ಇದು ಒಂದು.

**ಶ್ರೀ ಐವಾನ್ ಡಿ'ಸೋಜಾ:–** ಮಾನ್ಯ ಸಭಾಪತಿಗಳೆ, ಬಿಬಿಎಂಪಿ ಚುನಾವಣೆಗೂ, ಬೇರೆ ಚುನಾವಣೆಗೂ ವ್ಯತ್ಯಾಸವಿದೆ.

**(ಗೊಂದಲ)**

ಬಿಬಿಎಂಪಿ ಚುನಾವಣೆಯಲ್ಲಿ ಮೇಯರ್ ಮತ್ತು ಉಪಮೇಯರ್‌ಗೆ nomination ಆಗಿ ಯಾರು ಅಭ್ಯರ್ಥಿ ಎಂದು ಘೋಷಣೆ ಮಾಡಿದ ಮೇಲೆ ಅಲ್ಲಿ ಮತ ಹಾಕಲಾಗುತ್ತದೆ. ಆದರೆ ಶಾಸನಸಭೆಯಲ್ಲಿ ರಾಜ್ಯಪಾಲರು ಅವರಿಗೆ ಬಹುಮತ ಇದೆ ಎಂದು ನಿರೀಕ್ಷೆ ಮಾಡಿ ಅನುಮತಿ ಕೊಡುವುದು. That is the difference between Legislators and the Local Bodies. ನೀವು ಅದನ್ನು ಉದಾಹರಣೆ ಕೊಡುತ್ತೀರಲ್ಲಾ.

**ಶ್ರೀ ಎಂ.ಕೆ.ಪ್ರಾಣೇಶ್:–** ಈ ಕಡೆಯಿಂದ ಊಟ ಮಾಡಿದರು ಅದು ಊಟವೇ, ಆ ಕಡೆಯಿಂದ ಊಟ ಮಾಡಿದರು ಅದು ಊಟವೇ?

**(ಗೊಂದಲ)**

**ಶ್ರೀ ಭಾನುಪ್ರಕಾಶ್:–** ಮಾನ್ಯ ಸಭಾಪತಿಗಳೆ, ಹೊಂದಾಣಿಕೆ ಬಗ್ಗೆ ಯಾರೂ ಹೇಳಬಾರದು. ರಾಜಕಾರಣದಲ್ಲಿ ಅದೊಂದು ಅನಿವಾರ್ಯವಾಗಿ ಎಲ್ಲರಿಗೂ ಬಂದಿದೆ. ಅದನ್ನು 60 ವರ್ಷದಿಂದ ಜಾಸ್ತಿ ಮಾಡಿದವರು ಕಾಂಗ್ರೆಸ್‌ನವರು. ಒಂದೇ ದಿನದಲ್ಲಿ ನಾಂದೇಡ್ ಭಾಸ್ಕರ್‌ರಾವ್ ಈ ಕಡೆಯಿಂದ ಆ ಕಡೆ ಹೋಗಿದ್ದಾರೆ. ಜನತಾದಳದ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ನಾವು ಹೊಂದಾಣಿಕೆ ಮಾಡಿಕೊಂಡಿದ್ದೇವೆ. ನಾವು ಮಾಡಿಕೊಂಡರೆ ಮದುವೆ ನೀವು ಮಾಡಿಕೊಂಡರೆ ಇನ್ನೊಂದು ಎಂದು ಏಕೆ ಹೇಳುತ್ತೀರಿ? ಸುಮ್ಮನೆ ಇರಿ, ನೀವು ಮಾಡಿಕೊಂಡರು ಮದುವೆನೆ, ನಾವು ಮಾಡಿಕೊಂಡರು ಮದುವೆಯೇನೆ. ಅದಕ್ಕೆ ಗೌರವ ಕೊಡಿ. ಹೊಂದಾಣಿಕೆ ರಾಜಕೀಯ ಇವತ್ತು ಅನಿವಾರ್ಯವಾಗಿದೆ.

**ಶ್ರೀ ಐವಾನ್ ಡಿ'ಸೋಜಾ:–** ಪರ್ವತ ಪವೃತ್ತಿ ನಿಮ್ಮದು. **'**ಆಪರೇಶನ್ ಕಮಲ**'** ಮಾಡುವಲ್ಲಿ ಬಿಜೆಪಿ ಅಷ್ಟು ಪ್ರವೀಣರು ಈ ದೇಶದಲ್ಲಿ ಬೇರೆ ಯಾರು ಇಲ್ಲ.

**ಶ್ರೀ ಭಾನುಪ್ರಕಾಶ್:–** ಬಿಜೆಪಿ ಯವರಷ್ಟು ಮಾಡದೆ ಇರಬಹುದು. ಆದರೆ ಅದನ್ನು 60 ವರ್ಷದಿಂದ ಹೆಚ್ಚು ಮಾಡಿದವರು ಕಾಂಗ್ರೆಸ್‌ನವರು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ಬಿಜೆಪಿಗೆ ಅತಿ ಹೆಚ್ಚು ಮತಗಳನ್ನು ಕೊಟ್ಟಿದ್ದಾರೆ. ಉತ್ತರ ಪ್ರದೇಶದಲ್ಲಿ ಏಕೆ ಒಂದು seat ಬರಲಿಲ್ಲ ಎಂದು ಕೇಳುತ್ತಿದ್ದರು. ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ. No Vote No Seat. ನೀವು vote ಕೊಡದಿದ್ದರೆ ನಾವು seat ಕೊಡಬೇಕಾ? ಗೋವಾದಲ್ಲಿ vote ಕೊಟ್ಟರು ಕ್ರಿಶ್ಚಿಯನ್ ಬಂಧುಗಳನ್ನು ಮಂತ್ರಿಗಳಾಗಿ ಮಾಡಿಕೊಂಡಿದ್ದೇವೆ. ಈಗ ಮುಸ್ಲಿಂ ಬಂಧುಗಳು ನಮ್ಮ ಜೊತೆಗೆ ಬಂದಿದ್ದಾರೆ. ಅವರನ್ನು ಮಂತ್ರಿಗಳಾಗಿ ಮಾಡಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ದೇಶದಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಮತ್ತು ಹಿಂದೂಗಳು ಎಲ್ಲರೂ ಒಟ್ಟಾಗಿ ಬಿಜೆಪಿ ಪಕ್ಷಕ್ಕೆ ಮತವನ್ನು ಕೊಡುತ್ತಾರೆ. ಈಗ ವಿಷಯ ಬಿಡಿ. ನಾನು ಬಜೆಟ್ ಮೇಲೆ ಭಾಷಣವನ್ನು ಮುಂದುವರೆಸುತ್ತೇನೆ.

**ಶ್ರೀ ಐವಾನ್ ಡಿ'ಸೋಜಾ:–** ನೀವು No Vote No Seat ಎಂದು ಹೇಳಿರುವುದು ನನಗೆ ಅರ್ಥವಾಗಲಿಲ್ಲ. Seat ಮೊದಲು ಕೊಟ್ಟು ನಂತರ Vote ಪಡೆಯುವುದು ಎಂದೇ? ಇದನ್ನು ಹೇಗೆ presume ಮಾಡಲು ಬರುತ್ತದೆ? ಅದರ ಅರ್ಥ ನೀವು ಕೊಡುವುದಿಲ್ಲ ಎಂದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಗೋವಾದಲ್ಲಿ ಕ್ರಿಶ್ಚಿಯನ್ ಬಂಧುಗಳು ನಮಗೆ ಮತವನ್ನು ಕೊಟ್ಟರು. ಅವರಿಗೆ seat ಕೊಡಲಾಯಿತು. ಮಂತ್ರಿಗಳಾಗಿ ಮಾಡಿಕೊಳ್ಳಲಾಯಿತು. ಉತ್ತರ ಪ್ರದೇಶದಲ್ಲಿ ಇಷ್ಟು ದಿನ ಕೊಟ್ಟಿರಲಿಲ್ಲ. ಈಗ ಕೊಟ್ಟಿದ್ದಾರೆ. ಮುಸ್ಲಿಂ ಬಂಧುಗಳಿಗೆ seat ಕೊಡುತ್ತೇವೆ, ಮಂತ್ರಿಗಳಾಗಿ ಮಾಡಿಕೊಳ್ಳುತ್ತೇವೆ. ಇಡೀ ದೇಶದಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್ಖ್ ಮತ್ತು ಹಿಂದೂಗಳನ್ನು ದೂರ–ದೂರ ಇಡಬೇಕು ಎನ್ನುವ ಪ್ರಯತ್ನವನ್ನು 70 ವರ್ಷಗಳಿಂದ ಕಾಂಗ್ರೆಸ್ ಮಾಡಿಕೊಂಡು ಬಂದಿದೆ. ಈಗ ನಿಧಾನಕ್ಕೆ ವಿಫಲರಾಗುತ್ತೀದ್ದಿರಿ. ಹಿಂದೂಗಳ ಜೊತೆಗೆ ದಲಿತರನ್ನು, ಹಿಂದುಳಿದ ವರ್ಗದವರನ್ನು ದೂರ ಇಟ್ಟಿದ್ದೀರಿ. ಈಗ ಅವರು ನಮ್ಮ ಕಡೆಗೆ ಬರಲು ಪ್ರಾರಂಭ ಮಾಡಿದ್ದಾರೆ. ಈಗ ಏನು ಮಾಡಬೇಕು ಎಂದು ಗೊತ್ತಾಗದೆ ಇವರು ಕೈ ಹಿಚುಕಿಕೊಳ್ಳುತ್ತಿದ್ದಾರೆ.

**ಶ್ರೀ ಐವಾನ್ ಡಿ'ಸೋಜಾ:–** ಉತ್ತರ ಪ್ರದೇಶದಲ್ಲಿ 20%ರಷ್ಟು ಮುಸ್ಲಿಂರಿದ್ದರೂ ಒಬ್ಬ ಅಭ್ಯರ್ಥಿಯನ್ನು ಕೊಡಲು ನಿಮಗೆ ಆಗಲಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ನಾನು ಆಗಲೇ No Vote No Seat ಎಂದು ಹೇಳಿದೆ. ಈಗ vote ಕೊಟ್ಟಿದ್ದಾರೆ, ಮುಂದಿನ ದಿನಗಳಲ್ಲಿ ಕಾದುನೋಡಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಗೋವಾದಲ್ಲಿ 42% ಕ್ರಿಶ್ಚಿಯನ್ ಇದ್ದಾರೆ.

**ಉಪಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ ತಾವು ಬಜೆಟ್ ಮೇಲೆ ಮಾತನಾಡಿ. ಇದೇನು ಬೇರೆ ವಿಷಯ ಮಾತನಾಡುತ್ತಿದ್ದೀರಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಬಜೆಟ್‌ನಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ದಲಿತರು, ಹಿಂದುಳಿದವರು ಎಲ್ಲರೂ ಬರುತ್ತಾರೆ. ಈ ಎಲ್ಲ ಸಮುದಾಯದವರನ್ನು ಕಾಂಗ್ರೆಸ್‌ನವರು ನಮ್ಮಿಂದ ದೂರ ಇಟ್ಟಿದ್ದರಿಂದ ಅವರು ನಮ್ಮ ಹತ್ತಿರ ಬಂದಿರಲಿಲ್ಲ. ಈಗ ಬರುತ್ತಿದ್ದಾರೆ, ಅದಕ್ಕಾಗಿ ಬಿಜೆಪಿ ಸರ್ಕಾರ ಬರುತ್ತಿದೆ. ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆ ನಾವು.

ಇನ್ನು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟ ಹಾಗೆ, ಸೋಮವಾರ ಮಾರ್ಚ್ 13 2017ರ ಉದಯವಾಣಿ ಪತ್ರಿಕೆಯಲ್ಲಿ ಬಂದಿರುವ ಸುದ್ದಿಯನ್ನು ಓದುತ್ತೇನೆ, "ಅಹಿಂದಾಕ್ಕೆ ಘೋಷಣೆಯೇ ಎಲ್ಲಾ, ಅನುಷ್ಠಾನವಿಲ್ಲ" ಸಾಕು ಇದರ ಬಗ್ಗೆ ಏನು ಹೇಳವುದೇ ಬೇಡ. "2016–17ನೇ ಸಾಲಿನಲ್ಲಿ ಯೋಜನೆಗಳಿಗೆ ಮೀಸಲಿಟ್ಟ ಅನುದಾನದಲ್ಲಿ 45% ರಷ್ಟು ಬಳಕೆಯಾಗಿರುವುದಿಲ್ಲ" "ಯೋಜನೆಯ ದುರುಪಯೋಗ" "ಹಾಸ್ಟೇಲ್ ಸಿಗದಿರುವ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 1500 ರೂ.ಗಳನ್ನು ನೀಡುವ 'ವಿದ್ಯಾ ಸಿರಿ ಯೋಜನೆ' ಸ್ವಲ್ಪ ಮಟ್ಟಿನ ಯಶಸ್ಸು ಕಂಡಿದ್ದು, ಇದರ ದುರುಪಯೋಗವು ಆಗುತ್ತಿರುವ ಆರೋಪ ಕೇಳಿಬಂದಿದೆ" ಸತ್ಯವನ್ನು ಬರೆದಿದ್ದಾರೆ. ಅದರ ಬಗ್ಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. "ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಸಾವಿರಾರು ಸಣ್ಣ ಮತ್ತು ಅತಿಸಣ್ಣ ರೈತರು ಅರ್ಜಿ ಸಲ್ಲಿಸಿ ಎರಡು ವರ್ಷ ಕಳೆದರೂ ಸರಿಯಾದ ಸಮಯಕ್ಕೆ ಯೋಜನೆಯನ್ನು ಜಾರಿಗೊಳಿಸಿರುವುದಿಲ್ಲ. ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಕೊರೆಸಿರುವ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸದೆ ಇರುವುದರಿಂದ ದಲಿತ ಮತ್ತು ಹಿಂದುಳಿದ ರೈತ ಸಮುದಾಯಕ್ಕೆ ಯೋಜನೆ ಇದ್ದರೂ ಫಲ ದೊರೆಯದಂತೆ ಆಗಿದೆ" "ಅಲ್ಪಸಂಖ್ಯಾತರ ಮೂಗಿಗೆ ತುಪ್ಪ" ಇನ್ನು ಎಷ್ಟು ಅಂತ ಹೇಳಲಿ, ಎಷ್ಟು ಅಂತ ಓದಲಿ. ಇದನ್ನು ನಾನು ಏಕೆ ಹೇಳುತ್ತಿದ್ದನೆ ಎಂದರೆ, ಆಂಜನೇಯನವರೆ ನಿಮಗೆ ಟೀಕೆ ಮಾಡಬೇಕು ಎಂದು ಅಲ್ಲ. ನೀವು ಸ್ವಲ್ಪ ಒಳ್ಳೆಯ ಕೆಲಸಗಳನ್ನು ಮಾಡುತ್ತೀದ್ದಿರಿ. ನೀವು ಇಡೀ ರಾಜ್ಯವನ್ನು ಸುತ್ತುತ್ತಿದ್ದಿರಿ.

**(ಈ ಹಂತದಲ್ಲಿ ಜೆ.ಡಿ.(ಎಸ್) ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು.)**

**(ಗೊಂದಲ)**

**ಶ್ರೀ ಆರ್.ವಿ.ವೆಂಕಟೇಶ್(ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಇದು ಅಪ್ಪಟ ರಾಜಕೀಯವಾಗಿದೆ.

**ಸಭಾಪತಿಯವರು:–** ಮಾನ್ಯ ಸೋಮಣ್ಣನವರು ಮಾತನಾಡಲು ನಿಂತಿದ್ದಾರೆ, ಅವರು ತಮ್ಮ ಸದಸ್ಯರನ್ನು ಧರಣಿಯಿಂದ ವಾಪಸ್ಸು ಕರೆಯಬಹುದು.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರನ್ನು ನಾನು ಎರಡು ಅವದಿಯಲ್ಲಿ ನೋಡಿದ್ದೇನೆ. ನಾವು ತೀರ್ಮಾನ ಮಾಡಿರುವ ವಿಚಾರವಲ್ಲ ಇದು. ತಮ್ಮ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಚರ್ಚೆ ಮಾಡಿ ತೆಗೆದುಕೊಂಡಿರುವ ತೀರ್ಮಾನ ಮತ್ತು ಹೈಕೋರ್ಟ್‌ನ ನಿರ್ದೇಶನದಂತೆ ಆ ವರದಿಯನ್ನು ಮಂಡನೆ ಮಾಡಬೇಕಾಗಿತ್ತು. ಈ ಸದನಕ್ಕೆ ಮತ್ತು ಆ ಪೀಠಕ್ಕೆ ನೂರು ವರ್ಷಗಳ ಇತಿಹಾಸವಿದೆ ಎಂದು ಪದೇ ಪದೇ ತಾವೇ ಹೇಳಿದ್ದೀರಿ, ಅನೇಕ ಜನ ಹಿರಿಯ ಸದಸ್ಯರು ಸಹ ಇದೇ ಮಾತುಗಳನ್ನು ಹೇಳುತ್ತಿರುತ್ತಾರೆ. ವರದಿಯನ್ನು ಮಂಡನೆ ಮಾಡುವಾಗ ಅದರ ಸಾಧಕಬಾಧಕಗಳ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ, ಆ ಚರ್ಚೆಯಲ್ಲಿ ಒಂದು ತೀರ್ಮಾನಕ್ಕೆ ಬರಲಾಯಿತು. ಹಿಂದಿನ ಅಧಿವೇಶನದಲ್ಲಿ ಈ ವಿಚಾರ ಚರ್ಚೆಯಾಗಿತ್ತು. ಮೊನ್ನೆ ಮಾನ್ಯ ಸಭಾ ನಾಯಕರು ಸದನದಲ್ಲಿ ಉಪಸ್ಥಿತರಿದ್ದ ಸಂದರ್ಭದಲ್ಲಿ ಮಾನ್ಯ ಕಾನೂನು ಸಚಿವರು ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಆದಂತಹ ತೀರ್ಮಾನಗಳನ್ನು ಹೇಳಿದ ನಂತರ ತಾವು ರೂಲಿಂಗ್ ಕೊಟ್ಟಿದ್ದೀರಿ. ಅನ್ವರ್ ಮಾಣ್‌ಪ್ಪಾಡಿಯವರ ವರದಿಯನ್ನು ಕಾನೂನು ಮಂತ್ರಿಗಳಿಂದ ಮುಂದೆ ಸದನದಲ್ಲಿ ಮಂಡಿಸುತ್ತೇವೆ ಎನ್ನುವಂತಹ ಮಾತುಗಳನ್ನು ಹೇಳಿದ್ದರು. ತಾವು 'ಅವರು ಇಂತಹ ದಿನ ವರದಿಯನ್ನು ಮಂಡಿಸುತ್ತಾರೆ' ಎನ್ನುವ ಮಾತುಗಳನ್ನು ಹೇಳಿದ್ದೀರಿ. ತಾವು ಈ ಸದನದ ಗಾಂಭೀರ್ಯತೆಯನ್ನು ಮತ್ತು ಆ ಪೀಠದ ಗೌರವವನ್ನು ಎತ್ತಿಹಿಡಿಯುವಂತಹ ಕೆಲಸವನ್ನು ಮಾಡಿದ್ದೀರಿ. ಆದಾದ ಮೇಲೆ ಬೆಳಿಗ್ಗೆ ಮಾನ್ಯ ಕಾನೂನು ಸಚಿವರು ಅದನ್ನು ಮರು ಪರಿಶೀಲನೆ ಎನ್ನುವುದಕ್ಕಿಂತ ಹೆಚ್ಚಾಗಿ, ನೂರು ವರ್ಷಗಳ ಇತಿಹಾಸ ಇರುವ ಈ ಸದನದಲ್ಲಿ ಇಲ್ಲಿಯವರೆಗೆ ಆಗಿರುವ ನಡವಳಿಕೆಗಳನ್ನು ನೋಡಿದಾಗ, ಒಂದು ಸಾರಿ ಈ ಪೀಠದಿಂದ ಬಂದಂತಹ ಸಂದೇಶವನ್ನು ಆಡಳಿತ ಪಕ್ಷದವಿರಬಹುದು ವಿರೋಧ ಪಕ್ಷವಿರಬಹುದು ಅದಕ್ಕೆ ಬೇಕಾಗಿರುವ ಉತ್ತರವನ್ನು ಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಅಲ್ಪ ಸಂಖ್ಯಾತರ ಒಳಿತಿಗಾಗಿ ಈ ಕೆಲಸವನ್ನು ಸರ್ಕಾರ ಮಾಡಬೇಕಾಗಿದೆ. ಇದರಲ್ಲಿ ಯಾರು ಒಳಗೊಂಡಿದ್ದಾರೆ ಎನ್ನುವ ಚಿಂತನೆ ನಮಗಿಲ್ಲ. ಸರ್ಕಾರ ಸಚಿವ ಸಂಪುಟದಲ್ಲಿ ಈ ವಿಚಾರವನ್ನು ತಂದು ಅದನ್ನು ತಿರಸ್ಕರಿಸಿದೆ. ತಾವು ತಮ್ಮ ಪೀಠದಿಂದ ಕೊಟ್ಟಿರುವ ರೂಲಿಂಗ್ ಅನ್ನು ಅವರು ಸ್ವೀಕಾರ ಮಾಡಿದ್ದಾರೆ. ಮಾನ್ಯ ಸಭಾನಾಯಕರಾದಿಯಾಗಿ ತಾವು ಕೊಟ್ಟಿರುವ ರೂಲಿಂಗ್‌ಗೆ ಮನ್ನಣೆ ನೀಡಿ 'ಇಂತಹ ದಿನ ವರದಿಯನ್ನು ಮಂಡನೆ ಮಾಡುತ್ತೇವೆ' ಎಂದು ಹೇಳಿದ ಮೇಲೆ ಪುನಃ ' ತಮ್ಮ ರೂಲಿಂಗ್ ಅನ್ನು ಮರು ಪರಿಶೀಲನೆ ಮಾಡಿ' ಎಂದು ಕೇಳಿಕೊಳ್ಳುತ್ತಿದ್ದಾರೆ. ನಿಯಮಾವಳಿಗಳ ಪ್ರಕಾರ ಈ ರೀತಿ ಮಾಡುವುದಕ್ಕೆ ಬರುವುದಿಲ್ಲ. ನಾನು ತಮ್ಮ ಮೂಲಕ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತಿದ್ದೇನೆ. ಈ ವಿಚಾರವನ್ನು ಹೆಚ್ಚು ಎಳೆದಾಡುವುದು ಬೇಡ, ಎಳೆದಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದರೆ, ಎಲ್ಲೋ ಒಂದು ಕಡೆ ಈ ರೀತಿಯ ಗೊಂದಲವನ್ನು ಸೃಷ್ಟಿ ಮಾಡುವುದರಿಂದ ಮುಂದಿನ ದಿನಗಳಲ್ಲಿ ಇದು ಜನತೆಗೆ ಯಾವ ರೀತಿಯ ಸಂದೇಶವನ್ನು ನೀಡುತ್ತದೆ ಎನ್ನುವ ಸೂಕ್ಷ್ಮತೆಯನ್ನು ಅರ್ಥ ಮಾಡಿಕೊಂಡು ತಾವು ಕೊಟ್ಟಿರುವ ರೂಲಿಂಗ್‌ನ್ನು ಪಾಲನೆ ಮಾಡಬೇಕಾಗುತ್ತದೆ. ನಮ್ಮ ಸಭಾಪೀಠಕ್ಕೆ ಬಹಳ ದೊಡ್ಡ ಇತಿಹಾಸವಿದೆ. ಸರ್ಕಾರ ತನ್ನ ಸ್ವಾರ್ಥಕ್ಕೋಸ್ಕರವಾಗಿ ಅಥವಾ ಇನ್ನೊಬ್ಬರನ್ನು ಉಳಿಸುವುದಕ್ಕಾಗಿ ಅಥವಾ ಬೇರೆಯವರಿಂದ ಶಹಭಾಷ್‌ಗಿರಿಯನ್ನು ಪಡೆದುಕೊಳ್ಳುವುದಕ್ಕಾಗಿ ಈ ಸದನದ ಇತಿಹಾಸವನ್ನು ಮತ್ತು ಗಾಂಭೀರ್ಯತೆಯನ್ನು ಯಾವುದೇ ಕಾರಣಕ್ಕೂ ಹಾಳು ಮಾಡುವುದಕ್ಕೆ ತಾವು ದಯಮಾಡಿ ಅವಕಾಶವನ್ನು ಕೊಡಬಾರದೆನ್ನುವುದು ನನ್ನ ಪ್ರಾರ್ಥನೆಯಾಗಿದೆ. ತಾವು ಕೊಟ್ಟಿರುವ ರೂಲಿಂಗ್‌ಗೆ ತಾವು ಬದ್ಧರಾಗಿರಬೇಕು. ಮುಂದೆ ಏನಾಗಬೇಕು ಎನ್ನುವುದರ ಬಗ್ಗೆ ತಾವು ಸರ್ಕಾರಕ್ಕೆ ಹೇಳಬೇಕಾಗುತ್ತದೆ. ತಾವು ಏನು ಮಾಡಬೇಕೆಂದು ಚಿಂತನೆ ಮಾಡಿದ್ದೀರಿ ಆ ಅನುಭವಗಳನ್ನು ಈ ಸದನದ ಗಾಂಭೀರ್ಯಕ್ಕೆ ಚ್ಯುತಿ ಬಾರದಂತೆ ಹಂಚಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)(ತಮ್ಮ ಸ್ಥಾನದಿಂದ):–** ಸನ್ಮಾನ್ಯ ಸಭಾಪತಿಯವರೇ, ಭಾರತೀಯ ಜನತಾ ಪಕ್ಷದವರು ಧರಣಿ ಕುಳಿತಿದ್ದೇವೆ. ಅದಕ್ಕೆ ಜೆ.ಡಿ.(ಎಸ್) ಪಕ್ಷದವರು ಮತ್ತು ಪಕ್ಷೇತರರು ತಮ್ಮ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಅವರು ಸಹ ಧರಣಿ ಮಾಡುತ್ತಿದ್ದಾರೆ. ಆತ್ಮಸಾಕ್ಷಿ ಇರುವ ಕಾಂಗ್ರೆಸ್ ಸದಸ್ಯರು ಸಹ ಈ ಧರಣಿಯಲ್ಲಿ ಪಾಲ್ಗೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ, ಇದು ಕರ್ನಾಟಕ ರಾಜ್ಯದ ಮುಸ್ಲಿಂ ಬಾಂಧವರಿಗೆ ಸೇರಿದ 57 ಸಾವಿರ ಎಕರೆಯ 15 ಲಕ್ಷ ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ. ಇದರಲ್ಲಿ ಯಾರ್‍ಯಾರು ಭಾಗಿಗಳಾಗಿದ್ದಾರೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಈ ಮೊತ್ತದಿಂದ ಒಬ್ಬೊಬ್ಬ ಮುಸ್ಲಿಮರಿಗೆ 15 ಲಕ್ಷ ರೂಪಾಯಿಗಳನ್ನು ಹಂಚಬಹುದಾಗಿದೆ. ಮುಸ್ಲಿಂರು ಅನೇಕ ವರ್ಷಗಳಿಂದ ಕಾಂಗ್ರೆಸ್‌ನವರಿಗೆ ಓಟು ಮಾಡುತ್ತಾ ಬಂದಿದ್ದಾರೆ. ಕಾಂಗ್ರೆಸ್ ಸದಸ್ಯರಿಗೆ ಆತ್ಮ ಸಾಕ್ಷಿ ಎನ್ನುವುದು ಇದ್ದರೆ ಅವರುಗಳು ಸಹ ಬಂದು ಪ್ರತಿಭಟನೆಯಲ್ಲಿ ಭಾಗವಹಿ, ಧರಣಿಗೆ ಬರಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ಅಲ್ಪ ಸಂಖ್ಯಾತರ ಬಗ್ಗೆ ಇವರಿಗೆ ಇರುವಂತಹ ಕಾಳಜಿಯನ್ನು ನೋಡಿದರೆ ಭೂತದ ಬಾಯಿಯಿಂದ ಭಗವದ್ಗೀತೆ ಹೇಳಿಸಿದಂತಾಗಿದೆ.

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಕಳೆದ ನಾಲ್ಕಾರು ದಿನಗಳಿಂದ ಕಾನೂನು ನಿಯಮಾವಳಿ, ಸಭಾಪತಿಗಳ ಪೀಠ ಎಂದು ಹೇಳಿ ಇವತ್ತು ಸಭಾಪತಿಗಳ ಪೀಠಕ್ಕೂ ಅವಮಾನ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ನಿಜಕ್ಕೂ ಭೂತದ ಬಾಯಿಯಿಂದ ಭಗವದ್ಗೀತೆ ಬರುತ್ತಿದೆ ಎಂದು ನಮಗನ್ನಿಸುತ್ತಿದೆ.

**ಶ್ರೀ ವಿನಯಕುಮಾರ್ ಸೊರಕೆ(ನಗರಾಭಿವೃದ್ಧಿ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಒಮ್ಮೆ ನಮ್ಮಲ್ಲಿ ಒಂದು ಘಟನೆ ನಡೆಯಿತು. ಒಂದು ಮುಸ್ಲಿಂ ಪತ್ರಿಕೆಯಲ್ಲಿ ಹಿಂದು ದೇವರ ಬಗ್ಗೆ ಅವಹೇಳನಕಾರಿ ಚಿತ್ರಗಳು ಪ್ರಕಟವಾಗಿದ್ದವು. ಮರುದಿನ ಅದರ ಬಗ್ಗೆ ಗಲಾಟೆ ಪ್ರಾರಂಭವಾಯಿತು. ನಾನು 'ಯಾರು ಆ ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾನೆ ಆತನನ್ನು ಕೂಡಲೇ ಅರೆಸ್ಟ್ ಮಾಡಿ ಆತನ ಬಾಯಿ ಬಿಡಿಸಿ' ಎಂದು ಹೇಳಿದೆ. ನಂತರ ಪೊಲೀಸರು ಅವರನ್ನು ಹಿಡಿದು ತಂದು ಬಾಯಿ ಬಿಡಿಸಿದರು. ಅದರಲ್ಲಿ ಸಂಘ ಪರಿಹಾರದವರು ಮತ್ತು ಅವನು ಒಟ್ಟಾಗಿ ಸೇರಿಕೊಂಡು ಉದ್ದೇಶಪೂರ್ವಕವಾಗಿ ಗಲಾಟೆ ಎಬ್ಬಿಸುವುದಕ್ಕಾಗಿ ಈ ರೀತಿ ಮಾಡಿರುವುದು ಬೆಳಕಿಗೆ ಬಂತು. ಅದೇ ರೀತಿಯಲ್ಲಿ ಮಾನ್ಯ ಮಧುಸೂದನ್‌ರವರ ಜೊತೆಗೆ 5 ಜನ ಮತ್ತು ಅನ್ವರ್ ಮಾಣ್‌ಪ್ಪಾಡಿಯವರು ಸೇರಿಕೊಂಡು ಈ ರೀತಿ ಮಾಡುತ್ತಿದ್ದಾರೆ. ಆತ ನಮ್ಮ ಕಾಂಗ್ರೆಸ್ ಪಾರ್ಟಿಯಲ್ಲಿ ಎಲೆಕ್ಷನ್ ಏಜೆಂಟ್ ಆಗಿದ್ದರು.

**(ಗೊಂದಲ)**

**(ಈ ಹಂತದಲ್ಲಿ ಬಿ.ಜೆ.ಪಿ., ಜೆ.ಡಿ.(ಎಸ್) ಮತ್ತು ಪಕ್ಷೇತರ ಸದಸ್ಯರು ಸಭಾಪೀಠದ ಮುಂದೆ ಹೋಗಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.)**

**(ಗೊಂದಲ)**

**ಶ್ರೀ ಖಮರುಲ್ ಇಸ್ಲಾಂ:–** ಸನ್ಮಾನ್ಯ ಸಭಾಪತಿಯವರೇ, ಇಡೀ ದೇಶದಲ್ಲಿ ಬಾಬ್ರಿ ಮಸೀದಿ ಧ್ವಂಸ ಪ್ರಕರಣದಲ್ಲಿ ಹಿಂದು ಸಂಘಟನೆಗಳ ಜೊತೆಗೆ ಇವರು ಸಹ ಸೇರಿಕೊಂಡಿದ್ದರು. . . . . .

**(ಗೊಂದಲ)**

**ಶ್ರೀ ಕೆ.ಎಸ್.ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಅವರು ಮೊದಲು ರಾಜಿನಾಮೆಯನ್ನು ಕೊಟ್ಟು ಆಮೇಲೆ ಮಾತನಾಡಲಿ.

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಬಿ.ಜೆ.ಪಿ.ಯವರು ನಾವು ಅಧಿಕಾರಕ್ಕೆ ಬಂದ 60 ದಿನಗಳಲ್ಲಿ ಎಲ್ಲ ಕಪ್ಪು ಹಣವನ್ನು ವಾಪಸ್ಸು ತರಿಸುತ್ತೇವೆಂದು ಹೇಳಿದ್ದರು. . . .

**(ಗೊಂದಲ)**

**ಶ್ರೀ ವೀರಣ್ಣ ಮತ್ತಿಕಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ಇವರು ಸಾಯುವವರೆಗೆ 15 ಲಕ್ಷ ಕೋಟಿ ಅವ್ಯವಹಾರ ಎಂದೇ ಸಾಯುತ್ತಾರೆ. ಇದೆಲ್ಲ ಸುಳ್ಳಿನ ಕಂತೆಯಾಗಿದೆ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಒಂದು ನಿಮಿಷ ಶಾಂತವಾಗಿರಿ. ಈಗ ನಾನು ಮಾತನಾಡುತ್ತೇನೆ. ಸದನವನ್ನು ಚೆನ್ನಾಗಿ ನಡೆಸಬೇಕೆನ್ನುವುದು ಎಲ್ಲರ ಜವಾಬ್ದಾರಿಯಾಗಿದೆ. ಅದರಲ್ಲಿ ಇನ್ನೂ ಸ್ವಲ್ಪ ಹೆಚ್ಚಿನ ಜವಾಬ್ದಾರಿ ನನ್ನ ಮೇಲಿದೆ. ಸದನವನ್ನು ಚೆನ್ನಾಗಿ ನಡೆಸಿಕೊಂಡು ಹೋಗಬೇಕು ಒಳ್ಳೆಯ ಚರ್ಚೆಗಳು ಆಗಬೇಕೆನ್ನುವ ಆಸೆಗಳನ್ನು ಇಟ್ಟುಕೊಂಡಿರುವ ನಿಮ್ಮೆಲ್ಲರ ಜೊತೆಗೆ ನಾನೂ ಕೂಡ ಇದ್ದೇನೆ. ಯಾವುದೇ ಕಾರಣಕ್ಕಾಗಿ ಸಭಾಪತಿಗಳ ಸ್ಥಾನದಿಂದ ಬಂದಿರುವ ನಿರ್ಣಯವನ್ನು ಒಪ್ಪುವುದಕ್ಕೆ ಆಗುವುದಿಲ್ಲ ಒಪ್ಪಬೇಕು ಎನ್ನುವ ಚರ್ಚೆಯ ಹಿನ್ನೆಲೆಯಲ್ಲಿ ಈ ಸದನ ಸರಿಯಾಗಿ ನಡೆಯುವ ವಾತಾವರಣ ನಿರ್ಮಾಣವಾಗಿಲ್ಲ. ಆ ರೀತಿಯ ವಾತಾವರಣವನ್ನು ನಿರ್ಮಾಣ ಮಾಡಬೇಕಾಗಿರುವುದು ನಮ್ಮ ಧರ್ಮ. ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕು. ಎಲ್ಲರಿಗೂ ಸಮಾಧಾನ ಮತ್ತು ಸಂತೋಷವಾಗುವ ರೀತಿಯಲ್ಲಿ ಮತ್ತು ರಾಜ್ಯದ ಜನತೆ ನಮ್ಮ ಕಡೆ ನೋಡುತ್ತಿರುವುದರಿಂದ ಸದನವನ್ನು ಸರಿಯಾಗಿ ನಡೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಆದರೆ, ಸಭಾಪತಿಯ ಸ್ಥಾನದಲ್ಲಿ ಕುಳಿತಿರುವವರಿಗೆ ಆ ಜವಾಬ್ದಾರಿ ಸ್ವಲ್ಪ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಾನು ಹಿಂದಿನ ದಿನ ಅಂದರೆ ಗುರುವಾರ ದಿ: 24–03–2016ರಂದು ನಡೆದ ಸದನದ ನಡವಳಿಕೆಗಳನ್ನು ಸಹ ನೋಡಿದ್ದೇನೆ ಮತ್ತು ಇವತ್ತು ಬೆಳಿಗ್ಗಿನಿಂದ ನಾನೇ ಸದನದಲ್ಲಿದ್ದೇನೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇದು ಏಕೋ ಏನೋ ಸರಿಯಾಗುತ್ತಿಲ್ಲ ಎನ್ನತಕ್ಕಂಥ ಭಾವನೆ ನನ್ನ ಮನಸ್ಸಿನಲ್ಲಿ ಬರುತ್ತಿದೆ. ಸಭಾಪತಿಯವರು ಒಂದಲ್ಲ, ಎರಡಲ್ಲ, ಮೂರು ಸಾರಿ ರೂಲಿಂಗ್ ಕೊಟ್ಟರೂ ಸರ್ಕಾರ ಅದನ್ನು ಪಾಲಿಸಲಿಲ್ಲ ಎನ್ನತಕ್ಕಂಥ ಕೋಪ ವಿರೋಧ ಪಕ್ಷದವರಿಗಿದೆ. ಸರ್ಕಾರದಿಂದ ಅದರ ಬಗ್ಗೆ ಮತ್ತೊಮ್ಮೆ ಪ್ರಸ್ತಾಪ ಮಾಡಬೇಕೆನ್ನತಕ್ಕಂಥ ಅವಕಾಶವನ್ನು ಅವರು ಕೇಳುತ್ತಿದ್ದಾರೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ನಾನೂ ಸಹ ಬೆಳಿಗ್ಗಿನಿಂದ ಇಲ್ಲಿ ನಡೆಯುತ್ತಿರತಕ್ಕಂಥ ಘಟನಾವಳಿಗಳ ಹಿನ್ನೆಲೆಯಲ್ಲಿ ಚರ್ಚೆ ಮಾಡುತ್ತಿದ್ದೇನೆ. ಕೆಲವರ ಬಳಿ ನಾನು ಸಂಪರ್ಕ ಸಾಧಿಸಿ, ಮಧ್ಯಾಹ್ನ ಊಟದ ಸಮಯದಲ್ಲಿ ಅವರ ಜೊತೆಗೆ ಮಾತುಕತೆಯನ್ನು ಸಹ ಮಾಡಿದ್ದೇನೆ. ಈ ಹಿನ್ನೆಲೆಯಲ್ಲಿ ನಾನೊಂದು ಸಣ್ಣ ತೀರ್ಮಾನಕ್ಕೆ ಬಂದಿದ್ದೇನೆ. ಇದರ ಬಗ್ಗೆ ಮತ್ತಷ್ಟು ಕಾನೂನಿನ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅದು ನನ್ನ ಶಕ್ತಿ ಮೀರಿದ್ದು. ಹಾಗಾಗಿ ಈ ರಾಜ್ಯದಲ್ಲಿ ನನಗಿಂತ ದೊಡ್ಡವರು ಯಾರೆಂದರೆ, ಅವರು ಘನತೆವೆತ್ತ ರಾಜ್ಯಪಾಲರು. ನಾನು ಘನತೆವೆತ್ತ ರಾಜ್ಯಪಾಲರನ್ನು ಭೇಟಿ ಮಾಡಿ ಈ ಎಲ್ಲಾ ವಿಷಯಗಳನ್ನು ತಿಳಿಸಿ, ಅವರಿಗೆ ಈ ವರದಿಯನ್ನು ಪೂರ್ತಿಯಾಗಿ ಕೊಟ್ಟು, ಅವರೇನು ನಿರ್ಣಯವನ್ನು ತಿಳಿಸುತ್ತಾರೋ ಅದರಂತೆ ನಡೆಯಬೇಕೆಂದು ನಾನು ತೀರ್ಮಾನ ಮಾಡಿದ್ದೇನೆ. ಹಾಗಾಗಿ ನಾನೇ ಸ್ವತಃ ಹೋಗಿ ಘನತೆವೆತ್ತ ರಾಜ್ಯಪಾಲರನ್ನು ಭೇಟಿ ಮಾಡುತ್ತೇನೆ. ಘನತೆವೆತ್ತ ರಾಜ್ಯಪಾಲರನ್ನು ಭೇಟಿ ಮಾಡಲು ಸಮಯವನ್ನು ನಿಗದಿ ಮಾಡಿ ಎಂದು ನನ್ನ ಕಛೇರಿಗೆ ತಿಳಿಸಿದ್ದೇನೆ. ಇಷ್ಟೊತ್ತಿಗೆ ಅವರು ಘನತೆವೆತ್ತ ರಾಜ್ಯಪಾಲರನ್ನು ಭೇಟಿ ಮಾಡಲು ಸಮಯವನ್ನು ನಿಗದಿ ಮಾಡಿರಬಹುದು. ಆ ಹಿನ್ನೆಲೆಯಲ್ಲಿ ನಾನು ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆವಿಗೂ ಮುಂದೂಡುತ್ತಿದ್ದೇನೆ.

**(ಸದನವು ಸಂಜೆ 4 ಗಂಟೆ 02 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 29ನೇ ಮಾರ್ಚ್ ಮಾಹೆ 2016ರ ಮಂಗಳವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)**

~~~~~
~~~~~